ಶನಿವಾರ ಪೂಜಾ

CC-O. In Public Domain. Digitized by eGangotri

ಶ್ರೀರಾಮ ಮಹಿಮೆ

ಕೇಶವಭಟ್ಟನ ಪೂಜಾಕ್ರಮ

ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್
ಚಿಕ್ಕಪೇಟೆ • ಬೆಂಗಳೂರು - 560 053 • 22258217
Sri Vidyabharati Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀ ಸೀತಾರಾಮ ಪ್ರಸನ್ನ ॥

ಶನಿವಾರ ಪೂಜಾ

ಶ್ರೀರಾಮ ಮಹಿಮೆ

ಶ್ರೀರಾಮಾಷ್ಟೋತ್ತರ ಶತನಾಮಾವಳಿಃ
ಶ್ರೀರಾಮಾಷ್ಟಕಮ್ ಸಹಿತ

ಲೇಖಕರು : ಎನ್.ವಿ. ರಾವ್

ಶ್ರೀ ವಿದ್ಯಾ ಭಾರತೀ
ಪುಸ್ತಕ ಕೇಂದ್ರ
ಶಾರದಾ ಪೀಠ, ಶೃಂಗೇರಿ - 577 139

ಪ್ರಕಾಶಕರು
ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್
ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು
234, ಅಕ್ಕಪೇಟೆ, ಬೆಂಗಳೂರು : 560 053

ದೂ : 080-2225 8217 ● ಮೊ : 98802 25598

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಪ್ರಪಂಚದಲ್ಲಿ ಜನಿಸಿದ ಪ್ರತಿಯೊಬ್ಬನಿಗೂ ಯಾವುದಾದರೂ ಒಂದು ವಿಧವಾದ ದುಃಖ ಇದ್ದೇ ಇರುತ್ತದೆ. ಇದಕ್ಕೆ ಶನಿ ಎನ್ನುವರು. ಈ ಶನಿಯು ಏಳುವಾರಗಳಲ್ಲಿ ಒಂದು ವಾರಕ್ಕೆ ಅಧಿಪತಿಯು. ಆದರೆ ಈ ಏಳು ವಾರಗಳ ಅಧಿಪತಿಗಳಿಗೂ ಅಧಿಪತಿಯಾದ ಮತ್ತೊಬ್ಬನಿರುವನು. ಅವನೇ ಶ್ರೀ ವಿಷ್ಣುವು. ಈತನು ಅನಂತಾದ್ಯವತಾರವುಳ್ಳವನು. ರಾಮಾವತಾರವೂ ಸಹ ಆತನ ದಶಾವತಾರಗಳಲ್ಲಿನ ಒಂದು ಅವತಾರವು. ದುಃಖಕ್ಕೀಡಾಗಿರುವ ಪ್ರತಿಯೊಬ್ಬ ಪುರುಷನೂ, ಸ್ತ್ರೀಯೂ ಸಹ ಶನಿದೇವನ ಸ್ವಾಮಿಯಾದ ಶ್ರೀರಾಮಚಂದ್ರನನ್ನು ಆರಾಧಿಸುತ್ತಿದ್ದಲ್ಲಿ ಆತನೂ ಮತ್ತು ಆತನ ಸ್ವಾಮಿಯೂ ಸಹ ಪ್ರಸನ್ನರಾಗಿ ಸಕಲ ದುಃಖಗಳನ್ನು ಹೋಗಲಾಡಿಸುವರೆಂಬುದರಲ್ಲಿ ಲೇಶವೂ ಸಂಶಯವಿರುವುದಿಲ್ಲ. ಈ 'ರಾಮ' ಎಂಬ ಎರಡಕ್ಷರಕ್ಕೆ ಅರ್ಥವನ್ನು ಬರೆಯಲು ಹೋದಲ್ಲಿ ಅದಕ್ಕೆ ಅಂತ್ಯವೇ ? ಇದಕ್ಕೆ ವಾಲ್ಮೀಕಿಯೇ ಮುಖ್ಯ ಸಾಕ್ಷಿಯು. ಇಂತಹ ರಾಮನಾಮ ಮಹಿಮೆಯನ್ನು ಪಠಣ, ಶ್ರವಣಾದಿಗಳನ್ನು ಮಾಡೋಣ. ಅದರಿಂದ ಉಂಟಾಗುವ ಮಹದೈಶ್ವರ್ಯವನ್ನು ಸಹ ವರ್ಣಿಸಲು ಅಸಾಧ್ಯವು. ಹೀಗಿರಲು ದುಃಖಾಧಿಪತಿಯಾದ ಶನಿಯು ಪಾಮರರಾದ ನಮ್ಮಗಳನ್ನು ಪೀಡಿಸದಂತೆ ಈ ಅಲ್ಪಮತಿಯ ಜನಗಳ ಉಪಕಾರಾರ್ಥವಾಗಿ ಆ ದಿನ ಆಚರಿಸಬೇಕಾದ ಶ್ರೀರಾಮಪೂಜಾ ಮತ್ತು ಕಥೆಯನ್ನು ಶ್ರೀರಾಮ ಪ್ರೇರಣೆಯಿಂದ ಪ್ರೇರೇಪಿಸಿದಷ್ಟನ್ನು ವಾಚಕರ ಸಲುವಾಗಿ ಬರೆದಿರುತ್ತೇನೆ. ಈ ಕಥೆ ಬಹಳ ಸುಲಭ ಶೈಲಿಯಲ್ಲಿ ಬರೆದು ಅಲ್ಲಲ್ಲಿಯೇ ರಾಮನಾಮ ಮಹಾತ್ಮೆಯ ದೇವರ ನಾಮಗಳನ್ನೂ ಸೇರಿಸಿದೆ. ಪ್ರತಿಯೊಬ್ಬರೂ ಸುಲಭವಾಗಿ ಓದಲು ಅನುಕೂಲವಾಗಿದೆ. ಕರ್ನಾಟಕದ ಅಭಿಮಾನಿಗಳಾದ ಸ್ತ್ರೀ, ಪುರುಷರೆಲ್ಲರೂ ಶ್ರೀರಾಮಕಥೆ ಮತ್ತು ಪೂಜೆಯನ್ನು ಓದಿ ತದ್ವಾರಾ ಶ್ರೀರಾಮಚಂದ್ರಮೂರ್ತಿಯ ಕೃಪೆಗೆ ಪಾತ್ರರಾಗಿ ಇಹಲೋಕ ಪರಲೋಕಗಳಲ್ಲಿ . ಸೌಖ್ಯವನ್ನು ಪಡೆಯಬೇಕೆಂಬುದೇ ಗ್ರಂಥಕರ್ತನ ಕೋರಿಕೆಯು. ಈ ಸಣ್ಣ ಪುಸ್ತಕದಲ್ಲಿ ಏನಾದರೂ ದೋಷಾರೋಪಗಳಿದ್ದ ಪಕ್ಷದಲ್ಲಿ ಹಂಸಕ್ಷೀರ ನ್ಯಾಯದಂತೆ ಗುಣಗ್ರಾಹಿಗಳಾಗಬೇಕೆಂದು ಪ್ರಾರ್ಥಿಸುವ,

ಎನ್.ವಿ. ರಾವ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಾಮ ಮಹಿಮೆ

ಪ್ರಥಮ ಭಾಗ

ಸುರಪುರವೆಂಬುದೊಂದು ಅಗ್ರಹಾರ. ಅಲ್ಲಿ ಕೇಶವಭಟ್ಟನೆಂಬ ಬ್ರಾಹ್ಮಣನು ಬಹಳ ಆಚಾರಶೀಲನೂ, ಧರ್ಮಪರಾಯಣನೂ, ನಿಯಮನಿಷ್ಠನೂ ಆಗಿದ್ದನು. ಆದರೆ ಬಡತನಕ್ಕೆ ಸಿಕ್ಕಿ ಜೀವನಕ್ಕಿಲ್ಲದೆ, ರೋಗಗ್ರಸ್ತನಾಗಿ ಬಹಳ ಕಷ್ಟಪಡುತ್ತಿದ್ದನು. ಆದರೂ ಸತ್ಕುಲಪ್ರಸೂತನಾದ ಆ ಬ್ರಾಹ್ಮಣನು ತನಗೆ ಎಷ್ಟೇ ಕಷ್ಟವಿದ್ದಾಗ್ಯೂ ಸದಾಚಾರಯುಕ್ತನಾದುದರಿಂದ ಶಾಸ್ತ್ರೀತ್ಯಾ ಅರುಣೋದಯಕ್ಕೆ ಮುಂಚಿತವಾಗಿಯೇ ಎದ್ದು ಊರಿನ ಬಳಿ ಇದ್ದ ಮನೋಹರವಾದ ಸರೋವರಕ್ಕೆ ಹೋಗಿ ತನ್ನ ಪ್ರಾತಃಕಾಲದ ನಿತ್ಯಕರ್ಮಗಳೆಲ್ಲವನ್ನೂ ತೀರಿಸಿಕೊಂಡು ದೇವತಾರ್ಚನೆಗಾಗಿ ತುಳಸಿ, ಹೂವುಗಳನ್ನು ತೆಗೆದುಕೊಂಡು ಮನೆಗೆ ಬಂದು ಸ್ನಾನ ಮಾಡಿ ಇಷ್ಟ ದೇವನಾದ ಶ್ರೀ ರಾಮಚಂದ್ರಮೂರ್ತಿಯನ್ನು ಭಕ್ತಿಯಿಂದ ಪೂಜೆ ಮಾಡಿ, ವೈಶ್ವದೇವ ಬಲಿಹರಣಗಳನ್ನು ತೀರಿಸಿ, ಅತಿಥಿ ಅಭ್ಯಾಗತರನ್ನು ನಿಷ್ಠೆಯಿಂದ ಸತ್ಕರಿಸುತ್ತಾ ತನ್ನ ಸಂಸಾರದೊಂದಿಗೆ ಸುಖವಾಗಿದ್ದನು. ಬ್ರಾಹ್ಮಣ ವೇಷಧಾರಿಯಾದ ಶ್ರೀಮನ್ನಾರಾಯಣನು ಭಕ್ತರನ್ನು ಪರೀಕ್ಷಿಸಿ ಅವರಿಂದ ಮುಕ್ತಿಮಾರ್ಗವನ್ನು ತೋರಿಸುವುದು ಆತನ ವ್ಯಾಪಾರವಲ್ಲವೇ?

ಭಕ್ತಿಯುತನಾದ ಈ ಕೇಶವಭಟ್ಟನನ್ನು ಪರೀಕ್ಷಿಸಲೋಸುಗ ಶ್ರೀರಾಮನ್ನಾರಾಯಣನು ವೃದ್ಧ ಬ್ರಾಹ್ಮಣನ ರೂಪದಲ್ಲಿ ಒಂದಾನೊಂದು ದಿನ ಈತನ ಮನೆಗೆ ಮಟ ಮಟ ಮಧ್ಯಾಹ್ನ ಬಂದನು. ಬ್ರಹ್ಮವರ್ಚಸ್ಸಿನಿಂದ ತೇಜೋಮಯನಾದ ಆ ವೃದ್ಧ ಬ್ರಾಹ್ಮಣನನ್ನು ಅರ್ಘ್ಯ ಪಾದ್ಯಾದಿಗಳಿಂದ ಆದರಿಸಿ, ಆಸನದಲ್ಲಿ ಕುಳ್ಳಿರಿಸಿದನು.

ಕೇಶವಭಟ್ಟ - ಹೇ ! ವಿಪ್ರನೇ ! ಪಾಮರನಾದ ನನ್ನ ಮನೆಯು ಇಂದು ತಮ್ಮ ಪಾದಧೂಳಿಯಿಂದ ಪವಿತ್ರವಾಯಿತು. ನನ್ನ ಜನ್ಮವೂ ಸಹ ಸಾರ್ಥಕವಾಯಿತು, ತಾವು ಎಲ್ಲಿಂದ ಬರೋಣವಾಯಿತು ? ತಮ್ಮ ನಾಮಧೇಯವೇನು ? ಪಾಮರನ ಮನೆಗೆ ಬಂದ ಕಾರಣವು ತಾನೆ ಏನು ?

ವೃದ್ಧ ಬ್ರಾಹ್ಮಣ - ನಿನ್ನ ಈ ಹಿತೋಕ್ತಿಗಳು ಸಾಕು. ನನಗೆ ಹಸಿವು

CC-O. In Public Domain. Digitized by eGangotri

ಬಹಳವಾಗಿರುವುದರಿಂದ ಅದನ್ನು ಮೊದಲು ಪರಿಹರಿಸು.

ಕೇಶವಭಟ್ಟ - (ಸ್ವಲ್ಪ ಹೊತ್ತು ಯೋಚಿಸಿ) ಎಲೈ ಬ್ರಾಹ್ಮಣನೇ ! ಈಗ ನಮ್ಮ ಮನೆಯಲ್ಲಿ ಎಲ್ಲರೂ ಊಟ ಮಾಡಿರುವರು. ನಾನಾದರೋ ಅತ್ಯಂತ ದರಿದ್ರನು. ಆಯಾಯ ಹೊತ್ತಿಗೆ ಸಂಪಾದಿಸಿಕೊಂಡರೆ ಉಂಟು, ಇಲ್ಲವಾದರೆ ಆ ದಿನ ಉಪವಾಸವೇ.

ವೃದ್ಧ ಬ್ರಾಹ್ಮಣ - ಎಲೈ ಭಟ್ಟನೇ ! ಈ ನಿನ್ನ ಪುರಾಣವು ನನಗೆ ಬೇಕಾಗಿಲ್ಲ. ನನ್ನ ಹಸಿವನ್ನು ಹೋಗಲಾಡಿಸುವೆಯೋ ಇಲ್ಲವೋ ಹೇಳು ?

ಕೇಶವಭಟ್ಟ - ವಿಪ್ರರೇ ? ಇಷ್ಟು ಕೋಪಿಸಲಾಗದು. ನನ್ನ ಮೊಮ್ಮಗಳ ಎರಡು ಹೊತ್ತಿನ ಊಟಕ್ಕಾಗಿ ಇಟ್ಟಿರುವ ಒಂದು ತುತ್ತು ಅನ್ನವನ್ನಾದರೂ ತಂದು ಬಡಿಸುವೆನು, ಎಂದು ಹೇಳಿ ಅಡಿಗೆ ಮನೆಗೆ ಹೋದನು.

ಕೇಶವಭಟ್ಟನ ಅಡಿಗೆಯ ಮನೆಯ ಪ್ರವೇಶ

ವೃದ್ಧ ಬ್ರಾಹ್ಮಣನಿಗೆ ಮಾತುಕೊಟ್ಟು ಅಡಿಗೆ ಮನೆಯಲ್ಲಿ ತನ್ನ ಪತ್ನಿಯು ಮೊಮ್ಮಗಳ ಸಲುವಾಗಿ ಕೊಂಚ ಅನ್ನವನ್ನು ಮುಚ್ಚಿಡುತ್ತಿದ್ದ ಜಾಗವನ್ನು ನೋಡಲು ಮುಚ್ಚಳವು ಬೇರೆಯಾಗಿದ್ದಿತು. ಗಾಬರಿಯಿಂದ ಹತ್ತಿರಕ್ಕೆ ಹೋಗಿ ನೋಡಲು ಅನ್ನವಿರಲಿಲ್ಲ. ಪ್ರಾಯಶಃ ಮಾರ್ಜ್ಜಾಲನು ಭುಂಜಿಸಿದ್ದಾನೋ ಏನೋ! ವಾಚಕರೆ! ಇದೇನು ತಂತಿರಬಹುದು? ಆಗ ಕೇಶವಭಟ್ಟನ ಆಂತರ್ಯ ಏನಾಗಿರಬಹುದು ? ಅಲ್ಲಿಯೇ ಪ್ರಲಾಪಿಸಿದನು. ಇದ್ದ ವಿಷಯವನ್ನು ವೃದ್ಧ ಬ್ರಾಹ್ಮಣನಿಗೆ ತಿಳಿಸಿ ಅವನ ಮನ್ನಣೆಯನ್ನು ಪಡೆಯೋಣವೆಂದು ಅಡಿಗೆ ಮನೆಯಿಂದ ಬ್ರಾಹ್ಮಣನ ಬಳಿಗೆ ಬಂದು ಕೈಮುಗಿದುಕೊಂಡು, ಹೇ ಬ್ರಾಹ್ಮಣನೇ ! ವಿಧಿಯು ನನ್ನನ್ನು ಪರೀಕ್ಷಿಸತೊಡಗಿರುವುದು. ಪರಮಾತ್ಮನ ಮಾಯೆಯು ನನ್ನನ್ನು ಬಹಳವಾಗಿ ಬಂಧಿಸಿರುವುದು. ಆ ಒಂದು ತುತ್ತು ಅನ್ನವನ್ನೂ ಮಾರ್ಜ್ಜಾಲನು ನುಂಗಿರುವನಲ್ಲಾ, ನಾನೇನು ಹೇಳಲಿ! ನನ್ನ ಅಪರಾಧವನ್ನು ಮನ್ನಿಸಿರಿ.

ವೃದ್ಧ ಬ್ರಾಹ್ಮಣ - ಭಟ್ಟನೆ ! ಅನ್ನವಿಲ್ಲದಿದ್ದರೆ ಒಂದು ಪಂಚಪಾತ್ರೆ ನೀರನ್ನಾದರೂ ತಂದುಕೊಟ್ಟು ನನ್ನ ಹಸಿವನ್ನು ನೀಗಿಸದೆ ನನ್ನನ್ನು ವೃಥಾ ಬಳಲಿಸುತ್ತಿರುವೆಯಲ್ಲಾ! ಇದೇಯೋ ನಿನ್ನ ಅತಿಥಿ - ಅಭ್ಯಾಗತರ ಪೂಜೆ ?

CC-O. In Public Domain. Digitized by eGangotri

ಹೀಗೆಂದ ಬ್ರಾಹ್ಮಣನ ಮಾತನ್ನು ಕೇಳಿದ ಕೇಶವಭಟ್ಟನು ಪುನಃ ಅಡಿಗೆಯ ಮನೆಯೊಳಕ್ಕೆ ನೀರನ್ನು ತರುವ ಉದ್ದಿಶ್ಯದಿಂದ ಹೋದನು. ವಿಧಿ ವಿಲಾಸದಲ್ಲಿ ಒಳ್ಳೆಯ ಪತಿಗೆ ಕೆಟ್ಟ ಸತಿಯೂ, ಕೆಟ್ಟ ಪತಿಗೆ ಒಳ್ಳೆಯ ಸತಿಯೂ ದೊರಕುವುದು ಭಗವಂತನ ಮಹಿಮೆಯಲ್ಲವೇ?

ವಾಚಕರೇ ! ನಮ್ಮ ಕೇಶವಭಟ್ಟನಿಗೂ ಸಹ ಹಾಗೆಯೇ ಆಗಿತ್ತು. ಅಂದರೆ ಸದಾಚಾರ ಸಂಪನ್ನನಾದ ಈತನಿಗೆ ಕರ್ಣಕಠೋರಳಾದ ಸತಿಯು ದೊರೆತಿದ್ದಳು. ಆದರೆ ಮಾಡುವುದೇನು ? ಅದೂ ವಿಧಿವಿಲಾಸವಲ್ಲವೇ !

ಕೇಶವಭಟ್ಟನು ಬ್ರಾಹ್ಮಣನಿಗೆ ನೀರನ್ನು ತರಲು ಅಡಿಗೆಯ ಮನೆಗೆ ಹೋದನು. ಆದರೆ ಅಂಥಾ ಸತಿಯು ಈತನಿಗೆ ದೊರೆತಿರುವಾಗ ಇವನಿಗೆ ಏನು ತಾನೇ ಸ್ವಾತಂತ್ರ್ಯವಿರುವುದು. ಯಾವುದಕ್ಕೂ ತನ್ನ ಪತ್ನಿಯನ್ನು ಕೇಳಬೇಕಾಗಿರುವುದು. ಆದರಂತೆಯೇ ತನ್ನ ಪತ್ನಿಯನ್ನು ಕಂಡು, ಎಲೈ ಪತ್ನಿಯೇ ಹಜಾರದಲ್ಲಿ ಓರ್ವ ವೃದ್ಧ ಬ್ರಾಹ್ಮಣನು ಹಸಿವಿನಿಂದ ಬಹಳ ಸಂಕಟಪಡುತ್ತಿರುವನು. ಅತಿಥಿಗಳನ್ನು ಆದರಿಸುವುದು ನಮಗೆ ಶ್ರೇಯಸ್ಕರವು. ಒಂದು ತುತ್ತು ಅನ್ನವನ್ನು ಕೊಡೋಣವೆಂದು ಬಂದು ನೋಡಲು ಅಲ್ಲಿ ಅನ್ನವು ಮಾಯವಾಗಿರುವುದು. ಅನ್ನವಿಲ್ಲದಿರುವುದರಿಂದ ಒಂದು ಪಂಚಪಾತ್ರೆ ನೀರನ್ನಾದರೂ ಕೊಟ್ಟು ಸತ್ಕರಿಸೋಣ, ಆದ್ದರಿಂದ ನಿರ್ಮಲವಾಗಿ ಒಂದು ಪಂಚಪಾತ್ರೆಯಲ್ಲಿ ಶುದ್ಧವಾದ ಜಲವನ್ನು ತೆಗೆದುಕೊಂಡು ಹೋಗಿ ಆ ಬ್ರಾಹ್ಮಣನನ್ನು ಸತ್ಕರಿಸುವೆನು.

ಕೇಶವಭಟ್ಟನ ಹೆಂಡತಿ – (ಕೋಪೋದ್ರೇಕದಿಂದ) ಏನು ! ಬ್ರಾಹ್ಮಣನನ್ನು ಸತ್ಕರಿಸುವುದೇ ! ಅವನೇನು ನಿಮಗೆ ಹೊರಸಿಕೊಡುವನೋ ! ಬಾವಿಗೆ ಹೋಗಿ ನೀರನ್ನು ತರುವವರಿಗಾದರೆ ಅದರ ಕಷ್ಟ ಗೊತ್ತಾಗುವುದು ! ನೀರೂ ಇಲ್ಲ ಏನೂ ಇಲ್ಲ ! ಹೋಗಿ ಎಂದು ಮುಖಗಂಟಿನಿಂದ ಪತಿಯನ್ನು ಗದರಿಸಿದಳು.

ಕೋಪೋದ್ರೇಕದಿಂದ ಉತ್ತರವಿತ್ತ ತನ್ನ ಸತಿಯನ್ನು ಕುರಿತು, ಎಲೈ ಸತಿಯೇ ! ನಿನಗೆ ಅಷ್ಟು ಕಷ್ಟವಾಗಿದ್ದರೆ ನಾನು ರಾತ್ರಿಗೆ ಕುಡಿಯಬೇಕಾಗಿರುವ ಒಂದು ಪಂಚಪಾತ್ರೆ ನೀರನ್ನು ನನಗೆ ಈಗಲೇ ಕೊಟ್ಟುಬಿಡು. ನಾನು ರಾತ್ರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ನೀರನ್ನೇ ಕುಡಿಯುವುದಿಲ್ಲ ಎಂದು ಹೇಳಿ ಒಂದು ಪಂಚಪಾತ್ರೆಯ ನೀರನ್ನು ತೆಗೆದುಕೊಂಡು ಬಂದು ಬ್ರಾಹ್ಮಣನಿಗೆ ಕೊಟ್ಟನು.

ವೃದ್ಧ ಬ್ರಾಹ್ಮಣ - (ಇವರ ಕಷ್ಟದೆಸೆಯ ಆದ್ಯಂತವೆಲ್ಲವನ್ನೂ ಅರಿತು) ಎಲೈ ಬ್ರಾಹ್ಮಣನೇ ! ನಿನ್ನ ಭಕ್ತಿಗೆ ಮೆಚ್ಚಿದೆನು. ಈ ನಿನ್ನ ದಾರಿದ್ರ್ಯವು ಮಾಯವಾಗಲು ನಿನಗೆ ಶ್ರೀರಾಮಕಥಾ ಮತ್ತು ಪೂಜೆಯನ್ನು ತಿಳಿಸುವೆನು. ಆದರಂತೆ ನೀನು ಪ್ರತಿ ಶನಿವಾರವೂ ಆಚರಿಸುವುದೇ ಆದರೆ ನಿನ್ನ ವಿಶಿಷ್ಟ ಕಷ್ಟಗಳೂ ನಾಶವಾಗಿ ಅತ್ಯಂತ ಸುಖಿಪಡುವೆ ಎಂದು ಉಪದೇಶಿಸಿ, ವೃದ್ಧ ಬ್ರಾಹ್ಮಣರೂಪಿಯಾದ ಶ್ರೀಮನ್ನಾರಾಯಣನು ಅಂತರ್ಧಾನನಾದನು.

ಶ್ರೀರಾಮಕಥಾ ಮತ್ತು ಪೂಜಾಕ್ರಮ

ಪ್ರತಿ ಶನಿವಾರವೂ ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು ಮನೆಯನ್ನು ಗೋಮಯದಿಂದ ಸಾರಿಸಿ, ದೇವರ ಪಾತ್ರೆಗಳೆಲ್ಲವನ್ನೂ ಶುದ್ಧವಾಗಿ ತೊಳೆದಿಟ್ಟುಕೊಂಡು, ಸರೋವರ, ವಾಪಿ, ಕೂಪ, ತಟಾಕಾದಿ ಯಾವುಗಳಲ್ಲಿಯಾದರೂ ಸ್ನಾನ ಮಾಡಿ, ದೇವತಾರ್ಚನೆಗೆ ಪತ್ರ, ಪುಷ್ಪಾದಿಗಳನ್ನು ಸಂಗ್ರಹಿಸಿಕೊಂಡು, ಜಪತಪಾದಿಗಳನ್ನು ತೀರಿಸಿಕೊಂಡು ಶ್ರೀರಾಮನೈವೇದ್ಯಕ್ಕಾಗಿ ಐದು ಭಾಗ ತುಪ್ಪ ಇವುಗಳನ್ನು ಬೆರೆಸಿ ಪುಣ್ಯವಾರದ ಉಂಡೆಗಳನ್ನು ಮಾಡಿ, ಶ್ರೀರಾಮಚಂದ್ರನನ್ನು ಭಕ್ತಿಯಿಂದ ಪೂಜಿಸಿ ಮಾಡಿದ ಅಡಿಗೆಯನ್ನೂ ಉಂಡೆಗಳನ್ನೂ ನೈವೇದ್ಯ ಸಮರ್ಪಣೆ ಮಾಡಿ, ದೀನಬಂದೋ; ಅನಾಥ ರಕ್ಷಕ ! ಆಪದ್ಬಾಂಧವ ! ದಯಾಸಿಂಧೋ ! ಜಾನಕಿರಾಮ ? ದಶರಥರಾಮ ! ರಾಮಚಂದ್ರ ! ನಮ್ಮ ಕಷ್ಟಗಳನ್ನು ಪರಿಹರಿಸಿ ನಮ್ಮನ್ನು ಕಾಪಾಡು ಎಂಬುದಾಗಿ ತಮ್ಮ ಮನದಿಷ್ಟಾರ್ಥಗಳನ್ನು ಪ್ರಾರ್ಥಿಸಿಕೊಂಡು ಪ್ರದಕ್ಷಿಣೆ ನಮಸ್ಕಾರ ಮಾಡಿ, ನೈವೇದ್ಯ ಉಂಡೆಗಳನ್ನು ಸಮಭಾಗವಾಗಿ ಬ್ರಾಹ್ಮಣರಿಗೂ, ಮುತ್ತೈದೆಯರಿಗೂ, ಬಂಧು ಮಿತ್ರರಿಗೂ ಕೊಟ್ಟು ನಂತರ ತನ್ನ ಮನೆಯವರೂ ಭುಂಜಿಸಿ ಭಗವಧ್ಯಾನದಿಂದ ಕಾಲವನ್ನು ಕಳೆಯಬೇಕು. ಹೀಗೆ ಪ್ರತಿ ಶನಿವಾರ ಈ ಪೂಜೆಯನ್ನು ಯಾರು ತಪ್ಪದೇ ಮಾಡುವರೋ ಅವರು ಇಹಲೋಕದಲ್ಲಿ ಸುಖವನ್ನೂ, ಪರಲೋಕದಲ್ಲಿ ಮುಕ್ತಿಯನ್ನೂ ಪಡೆಯುವರು.

CC-O. In Public Domain. Digitized by eGangotri

ಮೇಲ್ಕಂಡಂತೆ ವೃದ್ಧ ಬ್ರಾಹ್ಮಣನಿಂದ ಉಪದೇಶಿಸಲ್ಪಟ್ಟ ಶ್ರೀರಾಮಕಥಾ ಮತ್ತು ಪೂಜೆಯನ್ನು ತಪ್ಪದಂತೆ ಕೇಶವಭಟ್ಟನು ಆಚರಿಸುತ್ತಿರಲು ಆ ಶ್ರೀರಾಮಕೃಪೆಯಿಂದ ಸಕಲೈಶ್ವರ್ಯವನ್ನು ಪಡೆದನು.

ಹೀಗಿರಲು ಐಶ್ವರ್ಯದಿಂದೊಡಗೂಡಿದ ಕೇಶವಭಟ್ಟನು ದಾನಧರ್ಮಗಳನ್ನು ಮಾಡಿ, ಮಾತಾಪಿತೃಗಳಿಗೆ ಪಿಂಡ ಪ್ರಧಾನ ಮಾಡಿ ಋಣಮುಕ್ತನಾಗಲು ಭಾಗೀರಥೀ ಸ್ನಾನಕ್ಕಾಗಿ ಯಾತ್ರಾಮಗ್ನನಾಗಿ ಸತಿಯನ್ನು ಕುರಿತು, ಎಲೈ ಸಾಧ್ವಿಯೇ ! ನಾವು ಹಿಂದೆ ಬಡತನದಿಂದ ಯಾತ್ರೆಗಳನ್ನು ಮಾಡಲಿಲ್ಲ. ಈಗ ಶ್ರೀರಾಮನ ಕೃಪೆಯಿಂದ ನಮಗೆ ಅತ್ಯಂತ ಐಶ್ವರ್ಯವು ಪ್ರಾಪ್ತಿಯಾಗಿರುವುದು. ಆದ್ದರಿಂದ ನಾವು ಭಾಗೀರಥೀ ಯಾತ್ರೆಗೆ ಹೋಗಿ ಆ ಪವಿತ್ರ ನದಿಯಲ್ಲಿ ಮಿಂದು, ನಮ್ಮ ಮಾತಾಪಿತೃಗಳಿಗೆ ಪಿಂಡ ಪ್ರಧಾನ ಮಾಡಿ, ಋಣಮುಕ್ತರಾಗಿ ಬರೋಣ ಬಾ, ಎಂದು ಹೇಳಿದನು.

ಎಂದೂ ಕಾಣದ ಬಿಕನಾಶಿಯಾದ ಈತನ ಸತಿಯು - ಎಲೈ ಪತಿಯೇ ನಿಮಗೆ ಹುಚ್ಚು ಹಿಡಿದಿರಬಹುದು, ನೀವೇ ಮುಕ್ತರಾಗಿ, ದೇವರು ಕೊಟ್ಟಾಗ ಐಶ್ವರ್ಯ ಸುಖವನ್ನನುಭವಿಸದೆ ಯಾತ್ರೆ ಮಾಡಬೇಕಂತೆ ! ನನಗೆ ಯಾವುದೂ ಬೇಡ, ನಾನು ಮನೆಯಲ್ಲಿಯೇ ಸೌಖ್ಯವಾಗಿರುವೆನು ಎಂದು ಹೇಳಿದ ಸತಿಯ ಮಾತನ್ನು, ಅವಳ ಕರ್ಮಶೇಷವು ಕಳೆದಿಲ್ಲವೆಂದು ಭಾವಿಸಿ ಶ್ರೀರಾಮಪೂಜೆ ಆಚರಿಸಿ, ಬ್ರಾಹ್ಮಣ ಸುಹಾಸಿನಿಯರ ಸಮಾರಾಧನೆಯನ್ನು ಮಾಡಿ ಅವರುಗಳನ್ನು ಭೂರಿದಕ್ಷಿಣೆಗಳಿಂದ ತೃಪ್ತಿಪಡಿಸಿ, ಮಗನಾದ ನಾರಾಯಣಭಟ್ಟನಿಗೆ ಶ್ರೀರಾಮಪೂಜೆಯನ್ನು ತಪ್ಪದೆ ಆಚರಿಸುವಂತೆ ಹೇಳಿ ತಾನು ಯಾತ್ರೆಗೆ ಹೊರಟನು.

ದ್ವಿತೀಯ ಭಾಗ

ತಂದೆಯಿಂದ ಆಜ್ಞಪ್ತನಾದ ನಾರಾಯಣಭಟ್ಟನು ವಿಧಿಪ್ರಕಾರ ಶ್ರೀರಾಮ ಪೂಜೆಯನ್ನು ಪ್ರತಿ ಶನಿವಾರವೂ ತಪ್ಪದೇ ಆಚರಿಸುತ್ತಿದ್ದನು.

ಹೀಗಿರಲು ಒಂದು ದಿನ ನಾರಾಯಣಭಟ್ಟನು ಯಥಾಪ್ರಕಾರದಂತೆ ಶ್ರೀರಾಮಪೂಜೆಯನ್ನು ಮಾಡಿ, ತಾಯಿಯನ್ನು ಕುರಿತು ಅಮ್ಮಾ ಶ್ರೀರಾಮನ ಕಥೆಯನ್ನು ಹೇಳುವೆನು, ಕೇಳು ಬಾರಮ್ಮ ಎಂದು ಕರೆದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾಯಿ - ಈಗ ಎಲ್ಲಿ ಹೇಳುವೆ ? ಮಧ್ಯಾಹ್ನವಾಗಿರುವುದು. ಊಟದ ವೇಳೆಯು, ಊಟವಾದ ನಂತರ ಕೇಳುವೆನು ಈಗ ಬೇಡ.

ನಾರಾಯಣಭಟ್ಟ-(ಭೋಜನಾನಂತರ) ಮಾತೆಯೇ! ಊಟವಾಗಿರುವುದಲ್ಲವೇ ? ಈಗ ಶ್ರೀರಾಮನ ಕಥೆಯನ್ನು ಹೇಳುವೆನು, ಕೇಳಮ್ಮಾ.

ತಾಯಿ - ಮಗನೇ ! ಈಗ ತಾನೆ ಊಟ ಮಾಡಿ ಹೊಟ್ಟೆ ಭಾರವಾಗಿರುವುದು. ಸ್ವಲ್ಪ ನಿದ್ರಿಸಿ ನಂತರ ಮಕ್ಕಳ ಬಟ್ಟೆ ಪಾತ್ರೆಗಳನ್ನು ತೆಗೆದುಕೊಂಡು ಬಾವಿಗೆ ಹೋಗಿ ಒಗೆದುಕೊಂಡು ಸಿಹಿ ನೀರು ತರಬೇಕಾಗಿರುವುದು. ಈಗ ಬೇಡ. ಸಾಯಂಕಾಲ ಕೇಳುವೆನು.

ನಾರಾಯಣಭಟ್ಟನು - (ಸಾಯಂಸಂಧ್ಯಾವಂದನಾ, ಶ್ರೀರಾಮದೇವರ ಮಂಗಳಾರತಿ ಪ್ರದಕ್ಷಿಣೆ ನಮಸ್ಕಾರಾದಿಗಳನ್ನು ತೀರಿಸಿಕೊಂಡು) ಅಮ್ಮಾ! ಈಗಲಾದರೂ ಹೇಳುವೆನು, ಕೇಳು ವಿರಾಮವಿರುವುದೇ ?

ತಾಯಿ - ಮಗೂ ! ಈಗ ಅಡಿಗೆ ಮಾಡಬೇಕಾಗಿರುವುದು. ಮಕ್ಕಳು ಆಳುತ್ತಿರುವರು. ಊಟವಾದ ನಂತರ ಕೇಳುವೆನು.

ನಾರಾಯಣಭಟ್ಟ - (ಊಟವಾದ ನಂತರ) ಮಾತೆಯೇ ! ಈಗ ನಿನ್ನ ಕೆಲಸಗಳೆಲ್ಲ ಪೂರೈಸಿರುವೆ ಈಗಲಾದರೂ ವಿರಾಮದಿಂದ ಕಥೆ ಕೇಳು.

ತಾಯಿ - ಅಯ್ಯೋ ! ನಿನಗೆ ಸ್ವಲ್ಪವೂ ಬುದ್ಧಿಯಿಲ್ಲದಂತೆ ಕಾಣುತ್ತದೆ. ಬೆಳಗಿನಿಂದ ಬೇಸತ್ತು ಸುಣ್ಣವಾಗಿ ಮನೆಯಲ್ಲಿನ ಕೆಲಸಗಳೆಲ್ಲವನ್ನು ತೀರಿಸಿಕೊಂಡು ವಿಶ್ರಮಿಸಿಕೊಳ್ಳೋಣವೆಂದರೆ ನೀನು ನನಗೆ ಬಹಳ ತೊಂದರೆಯನ್ನು ಕೊಡುತ್ತಿರುವೆಯಲ್ಲಾ; ಈ ರಾಮಕಥೆಯನ್ನು ಪ್ರತಿ ದಿನವೂ ಕೇಳುತ್ತಿರುವೆನು. ಕೇಳಿ ಕೇಳಿ ನನಗೆ ಬೇಜಾರಾಗಿರುವುದು. ಈ ಕಥೆಯು ನಿನಗೇ ಇರಲಿ, ನಾನು ನಿದ್ರಿಸುವೆನು, ಎಂದು ಹೇಳಿ ತನ್ನ ಕೊಠಡಿಗೆ ಹೋಗಿ ನಿದ್ರಿಸಿದಳು.

ಇಂದಿನ ದಿನದ ಶ್ರೀರಾಮಕಥೆಯ ಪಠಣ ಮತ್ತು ಶ್ರವಣಕ್ಕೆ ವಿಘ್ನವುಂಟಾಗಿದ್ದಕ್ಕೆ ಬಹಳ ಪಶ್ಚಾತ್ತಾಪಪಟ್ಟು ತಾನೂ ನಿದ್ರಿಸಿದನು.

ಶ್ರೀರಾಮಕಥಾ ಪಠಣ - ಶ್ರವಣವನ್ನು ಕೇಶವಭಟ್ಟನ ಮನೆಯಲ್ಲಿ ಆತನ ಮಗನೂ, ಸತಿಯೂ ಸಹ ಬಿಟ್ಟಿದ್ದರಿಂದ ಶ್ರೀರಾಮನು ಇವರಿಗೆ ತನ್ನಲ್ಲಿ ಪುನಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೆಚ್ಚಿನ ಭಕ್ತಿ ಹುಟ್ಟಲೆಂದು ಪೂರ್ವ ಬಡತನಕ್ಕಿಂತಲೂ ಹೆಚ್ಚಿನ ಬಡತನವನ್ನು ಕೊಟ್ಟನು.

ಬಡತನವನ್ನು ಲೆಕ್ಕಿಸದೆ ನಾರಾಯಣಭಟ್ಟನು ಒಂದು ದಿನ ನದಿಗೆ ಸ್ನಾನಕ್ಕಾಗಿ ಹೋಗುತ್ತಿರಲು ತಾಯಿಯು ಇವನನ್ನು ಕುರಿತು ನೀನು ಸ್ನಾನಕ್ಕಾಗಿ ಹೊರಟಿರುವೆ, ಮನೆಯಲ್ಲಿ ನಿನ್ನ ಮಗಳು ಹಸಿವೆಂದು ಅಳುತ್ತಿರುವಳು, ಒಂದು ಕಾಳು ಅಕ್ಕಿ ಇಲ್ಲ, ನಾನೇನು ಮಾಡಲಿ ಎಂದು ಕೇಳಿದನು.

ನಾರಾಯಣಭಟ್ಟ - ಹಾಗಿದ್ದರೆ ನೆರೆಮನೆಯಲ್ಲಿ ಸಾಲವಾಗಿ ಒಂದು ಸೇರು ಅಕ್ಕಿಯನ್ನು ತೆಗೆದುಕೊಂಡು ಬಂದು ಇಂದಿನ ಅಡಿಗೆಯನ್ನು ಮಾಡು.

ತಾಯಿ - ನಾನು ಯಾರನ್ನೂ ಸಾಲ ಕೇಳುವುದಿಲ್ಲ. ಸಾಲ ತಂದವರಿಗೆ ತೀರಿಸುವುದು ತಾನೇ ಏನು ? ನೀನೇ ಎಲ್ಲಿಯಾದರೂ ಸಾಲ ತಂದುಕೊಟ್ಟು ಹೋಗು.

ನಾರಾಯಣಭಟ್ಟ - ಅಮ್ಮಾ! ನನಗ್ಯಾರು ಸಾಲ ಕೊಡುವರು ? ಶ್ರೀರಾಮ ಕಟಾಕ್ಷವು ನಮಗೆ ತಪ್ಪಿಹೋಯಿತು.

ತಾಯಿ - ರಾಮ ಕಟಾಕ್ಷವು ತಪ್ಪಿಹೋದರೆ ನಾಲ್ಕು ಮನೆ ಭಿಕ್ಷೆ ಮಾಡಿಕೊಂಡು ಬಾ! ಅದೆಲ್ಲ ನನಗ್ಯಾಕೆ ಹೇಳುವೆ?

ನಾರಾಯಣಭಟ್ಟ - ಅಮ್ಮಾ! ಹಾಗಾದರೆ ಭಿಕ್ಷಕ್ಕಾದರೂ ಹೋಗುವೆನು, ಒಂದು ತಂಬಿಗೆಯನ್ನು ಕೊಡು.

ತಾಯಿ - (ಮನೆಯಲ್ಲಿ ಪಾತ್ರೆಗಳನ್ನೆಲ್ಲಾ ಹುಡುಕಿ) ಒಡಕು ತಂಬಿಗೆಯೊಂದಕ್ಕೆ ಹುಣಸೇಹಣ್ಣನ್ನು ಮೆತ್ತಿ ಅದನ್ನು ತಂದು ಮಗನ ಕೈಗಿತ್ತಳು.

ನಾರಾಯಣಭಟ್ಟ - (ತಂಬಿಗೆಯನ್ನು ತೆಗೆದುಕೊಂಡು) ಹಾ ! ಶ್ರೀರಾಮಚಂದ್ರ ! ನಿನ್ನಲ್ಲಿ ನನ್ನ ಅಪರಾಧವೇನಿರುವುದು ! ನನ್ನನ್ನು ಹೆಚ್ಚಿಗೆ ಪರೀಕ್ಷಿಸಲೋಸುಗ ನನಗೀ ಗತಿಯನ್ನು ಕೊಟ್ಟೆಯಾ ! ಚಿಂತೆಯಿಲ್ಲ, ಈ ಭಿಕ್ಷಾಟನೆಯಲ್ಲಿದ್ದರೂ ನಿನ್ನ ರಾಮನಾಮ ಸವಿಯನ್ನು ಬಿಡುವುದಿಲ್ಲವು. ಜೈ ರಘುವೀರ ಸಮರ್ಥ ! ಎಂದು ಸುರಪುರದ ಬೀದಿಯಲ್ಲಿ ಭಿಕ್ಷೆಗೆ ಹೊರಟನು.

CC-O. In Public Domain. Digitized by eGangotri

ರಾಗ ಪೀಲು – ಏಕತಾಳ

ರಘುಪತಿ। ರಾಘವ। ರಾಜಾರಾಮ। ಪತಿತಪಾವನ। ಸೀತಾರಾಮ ॥ಪ॥ ಭಕ್ತಪೋಷಕ। ರಾಜಾರಾಮ। ಮುಕ್ತಿಪ್ರದಾಯಕ ಸೀತಾರಾಮ ॥ಅ॥ ಭಯಭಯಭಂಜನ। ರಾಜಾರಾಮಾ। ಭವ್ಯವಿಭಂಜನ ಸೀತಾರಾಮ ॥2॥ ಜಾನಕಿವಲ್ಲಭ। ಜೈ ಜೈ ರಾಮ। ರಘುರಾಮ ರಾಜಾರಾಮ ॥3॥

ತನ್ನ ಅಹನ್ಯಹನಿ ಕಾಲಕ್ಷೇಪಕ್ಕೆ ಬೇಕಾದಷ್ಟು ಮಾತ್ರ ಭಿಕ್ಷೆ ಬೇಡಿಕೊಂಡು ಬಂದು ತಂದಿದ್ದನ್ನು ತಾಯಿಯ ವಶಕ್ಕೆ ಕೊಟ್ಟು ರಾಮಧ್ಯಾನ ಪಾರಾಯಣನಾಗಿದ್ದನು.

ವಾಚಕರೇ! ನಾರಾಯಣಭಟ್ಟನ ಚರಿತ್ರೆಯನ್ನು ಸದ್ಯಕ್ಕೆ ಇಲ್ಲಿಯೇ ನಿಲ್ಲಿಸಿ ಕೇಶವಭಟ್ಟನ ವಿಚಾರವನ್ನು ಸ್ವಲ್ಪ ತಿಳಿದುಕೊಳ್ಳೋಣ.

ರಾಮಧ್ಯಾನ ಮಾಡುತ್ತಾ ಕಾಲ್ನಡಿಗೆಯಲ್ಲಿ ಕೇಶವಭಟ್ಟನು ಆರು ತಿಂಗಳು ಪ್ರಯಾಣ ಮಾಡಿ, ಕಾಶೀಕ್ಷೇತ್ರವನ್ನು ಸೇರಿ ಅಲ್ಲಿ ತೊಂಭತ್ತು ದಿನಗಳು ವಾಸ ಮಾಡಿದನು. ಅಲ್ಲಿ ಇರುವವರೆಗೂ ಪ್ರತಿದಿನವೂ ಪಾವನಳಾದ ಗಂಗೆಯಲ್ಲಿ ಮಿಂದು, ತನ್ನ ಮಾತಾಪಿತೃಗಳಿಗೆ ಪಿಂಡ ಪ್ರದಾನ ಕೊಟ್ಟು ವಿಶ್ವೇಶ್ವರನ ಸಂದರ್ಶನ ಮಾಡಿಕೊಂಡು, ರಾಮಭಕ್ತ ಪರಾಯಣನಾಗಿ ತೊಂಭತ್ತು ದಿನಗಳಿದ್ದು, ನಂತರ ಗಂಗಾ ಸಮೇತನಾಗಿ ಕಾಲ್ನಡಿಗೆಯಲ್ಲಿಯೇ ತನ್ನ ವಾಸಸ್ಥಾನವಾದ ಸುರಪುರಕ್ಕೆ ಬಂದನು. ಊರೆಲ್ಲಾ ಹುಡುಕಿದರೂ ತನ್ನ ಮನೆಯ ಗುರುತೇ ಸಿಕ್ಕಲಿಲ್ಲವು. ಹೆಂಡತಿಯ ಹೆಸರು ಹಿಡಿದು ಕೂಗುತ್ತಾ ಬೀದಿಯಲ್ಲಿ ಅಲೆದನು. ಯಾವುದೋ ಒಂದು ಮನೆಯೊಳಗಿನಿಂದ ತಲೆಯ ಕೂದಲನ್ನು ಕೆದರಿಕೊಂಡು, ಮಲಿನ ವಸ್ತ್ರವನ್ನುಟ್ಟ ಸ್ತ್ರೀವ್ಯಕ್ತಿಯೊಂದು ಈತನನ್ನು ಗುರ್ತಿಸಿ, ಇದೇಕೆ ಹೀಗೆ ಕಿರುಚಿಕೊಳ್ಳುವಿರಿ? ಇಷ್ಟು ದಿವಸ ಯಾತ್ರೆ ಹೋಗಿದ್ದವರಿಗೆ ಮನೆಯ ಗುರ್ತೇ ಸಿಕ್ಕಲಿಲ್ಲವೋ? ಹುಡುಕಿಕೊಂಡು ಹೋದ ರಾಮನನ್ನು ಕರೆದುಕೊಂಡು ಬಂದರೋ? ಇದೇ ಮನೆ; ಒಳಗೆ ಬನ್ನಿ, ಮನೆಯ ಕಡೆ ತಾಪತ್ರಯವೇನಾದರೂ ತಮಗೆ ಇದ್ದೀತೆ? ಯಾವ ಗಂಡಸಾದರೂ ಹೀಗೆ ತಿಂಗಳಾನುಗಟ್ಟಲೆ ಹೆಂಡತಿ ಮಕ್ಕಳನ್ನು ಬಿಟ್ಟು ಹೋಗುವನೆ? ನಿಮಗೇಕೆ ಇಂಥ

CC-O. In Public Domain. Digitized by eGangotri

ದುರ್ಬುದ್ಧಿ ಹುಟ್ಟಿತೋ ನಾ ಕಾಣೆ, ಸದ್ಯಕ್ಕೆ ಇಷ್ಟು ಮಟ್ಟಿಗೆ ಜೀವಂತರಾಗಿ ಬಂದಿರಲ್ಲಾ ಅಷ್ಟೇ ಸಾಕು.

ಕೇಶವಭಟ್ಟ - ಪತ್ನಿಯೇ ! ಬಾಗಿಲಿಗೆ ಬರುವಾಗಲೇ ಕಠೋರ ಮಾತುಗಳನ್ನಾಡುವೆಯಲ್ಲಾ ! ಆಡಬಾರದು, ಒಳಗೆ ನಡೆ, ಶ್ರೀರಾಮನನ್ನು ನಿಂದಿಸಬಾರದೆಂದು ಹೇಳುತ್ತಾ ಸತಿಯೊಂದಿಗೆ ಒಳಗೆ ತಂದಿದ್ದ ಗಂಗೆಯನ್ನು ದೇವರ ಮುಂದಿಟ್ಟು, ಪ್ರಿಯೇ ! ನಿನ್ನನ್ನು ನಾನು ಯಾತ್ರೆಗೆ ಕರೆದಾಗ್ಕೆ ನಾನು ಇಲ್ಲಿ ಸುಖವನ್ನನುಭವಿಸುವೆನು, ಯಾತ್ರೆಗೆ ಬರುವುದಿಲ್ಲ ಎಂದು ಹೇಳಿದೆಯಲ್ಲಾ ! ಈಗ ಆ ಸೌಖ್ಯವೆಲ್ಲವೂ ಮಾಯವಾಗಲು ಕಾರಣವೇನೆಂಬುದನ್ನಾದರೂ ತಿಳಿದಿರುವೆಯಾ ? ಹೀಗೆ ಸತಿಪತಿಗಳು ಮಾತನಾಡುತ್ತಿರುವಾಗ ಭಿಕ್ಷಾಟನೆಗೆ ಹೋಗಿದ್ದ ನಾರಾಯಣಭಟ್ಟನು ಆಗಮಿಸಿದನು.

ನಾರಾಯಣಭಟ್ಟನು ತನ್ನ ತಂದೆಗೆ ಸಾಷ್ಟಾಂಗ ಪ್ರಣಾಮ ಮಾಡಿ ಕೈ ಮುಗಿದುಕೊಂಡು ನಿಂತನು.

ಕೇಶವಭಟ್ಟ - ಮಗನೇ ! ಇದೇನು ನಮ್ಮ ಐಶ್ವರ್ಯವೆಲ್ಲವೂ ಹೀಗೆ ಮಾಯವಾಗಲು ಕಾರಣವೇನು ? ನೀನು ನನ್ನ ಆಜ್ಞೆಯಂತೆ ಶ್ರೀರಾಮಕಥಾ ಮತ್ತು ಪೂಜೆಯನ್ನು ತಪ್ಪದೆ ಪ್ರತಿದಿನವೂ ಆಚರಿಸುತ್ತಿದ್ದೆಯಾ ?

ನಾರಾಯಣಭಟ್ಟ - ತಂದೆಯೇ ! ಏನು ಹೇಳಲಿ ? ನಿಮ್ಮ ಆಜ್ಞೆಯನ್ನು ತಪ್ಪದೆ ನೆರವೇರಿಸುತ್ತಿದ್ದೆನು. ಆದರೆ ದುರಾದೃಷ್ಟದಿಂದ ಮಾತೆಯು ಅದಕ್ಕೆ ಕಿವಿಗೊಡದಿರಲು ನಾನು ದಿಗ್ಭ್ರಾಂತನಾಗಿ ಕಥೆಯನ್ನು ಹೇಳದೆ ಮಲಗಿಬಿಟ್ಟೆನು. ಬೆಳಿಗ್ಗೆ ಎದ್ದು ನೋಡುವಲ್ಲಿ ಮನೆಯು ಈ ರೀತಿಯಾಗಿತ್ತು.

ಕೇಶವಭಟ್ಟ - (ಈ ಮಾತುಗಳನ್ನು ಕೇಳಿದೊಡನೆಯೇ ಕೋಪಗೊಂಡವನಾಗಿ) ನೀನೂ ಸರಿಯೇ; ನಿನ್ನ ತಾಯಿಯೂ ಸರಿಯೇ ! ನೀನು ಮಾಡಿದ ಈ ಮಹಾಪರಾಧಕ್ಕೆ ಈ ಕ್ಷಣ ನನಗೆ ಮುಖವನ್ನು ತೋರಿಸದೆ ಹೊರಟು ಹೋಗು.

''ನೀನು ಎಂದು ಶ್ರೀರಾಮನ ದರ್ಶನವನ್ನು ಮಾಡಿಕೊಂಡು ಆತನಿಂದ ವರವನ್ನು ಪಡೆದುಕೊಂಡು ಬರುವೆಯೋ, ಆಂದು ನಿನ್ನ ಮುಖವನ್ನು ತೋರಿಸು'' ಎಂದು ಹೇಳಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರಾಯಣಭಟ್ಟನು ತಂದೆಯ ಆಜ್ಞೆಯನ್ನು ಶಿರಸಾವಹಿಸಿ, ಮಾತಾಪಿತೃಗಳಿಗೆ ವಂದಿಸಿ, ಶ್ರೀರಾಮನನ್ನು ಹುಡುಕುವ ಉದ್ದಿಶ್ಯದಿಂದ ಹೊರಟು ಆ ವರ್ತಮಾನವನ್ನು ತನ್ನ ಸತಿಗೆ ತಿಳಿಸಲೋಸುಗ ಅವಳ ಕೊಠಡಿಗೆ ಹೋಗಿ ವೃತ್ತಾಂತವನ್ನು ತಿಳಿಸಲು ಆಕೆಯು ''ನೀವೇನೋ ಹೋಗಬಹುದು, ನಿಮ್ಮ ಮಗಳನ್ನು ಮಾತ್ರ ಕರೆದುಕೊಂಡು ಹೋಗುವುದು. ಒಂದು ಘಳಿಗೆಯೂ ಬಿಡಕೂಡದು'' ಎಂದು ಹೇಳಿದಳು.

ನಾರಾಯಣಭಟ್ಟ - ಪ್ರಿಯೇ ! ಇದೇನು ಹೀಗೆ ಹೇಳುವೆ ! ನಾನು ಆಹಾರವಿಲ್ಲದೆ ಅರಣ್ಯ ಸಂಚಾರದಿಂದ ಶ್ರೀರಾಮನನ್ನು ಹುಡುಕಬೇಕಾಗಿದೆ. ಮಗಳನ್ನು ಹೇಗೆ ಕರೆದುಕೊಂಡು ಹೋಗಲಿ ! ನೀನೇ ಯೋಚಿಸು.

ಈ ಉಪದೇಶವು ಬೇಕಿಲ್ಲವೆಂದು ಹೇಳಿ, ನೆರೆಮನೆಯಲ್ಲಿ ಆಡುತ್ತಿದ್ದ ಮಗಳನ್ನು ಕರೆದುಕೊಂಡು ಬಂದು ಗಂಡನ ಬಳಿ ಬಿಟ್ಟಳು.

ಎದುರು ಮಾತನಾಡದೆ ನಾರಾಯಣಭಟ್ಟನು ತನ್ನ ದುರವಸ್ಥೆಗೆ ನೊಂದು ಮಗಳನ್ನು ಹೆಗಲ ಮೇಲೆ ಕೂಡಿಸಿಕೊಂಡು ಶ್ರೀರಾಮಭಜನೆ ಮಾಡುತ್ತಾ ಪಿತೃವಾಕ್ಯ ಪರಿಪಾಲನೆಗಾಗಿ ಪ್ರಯಾಣ ಮಾಡಿದನು.

ರಾಗ - ಆಟತಾಳ (ಮಾತನಾಡಬಾರದೇನೋ - ಎಂಬಂತೆ)

ರಾಮ ಮಂತ್ರವ ಜಪಿಸೋ ! ಹೇ ಮಾನವ ॥ಪ॥ ಆ ಮಂತ್ರ ಈ ಮಂತ್ರ ಎನುತ ನೀ ಕೆಡಬೇಡ ॥ಅ॥ ಕುಲಹೀನನಾದರೂ । ಕೂಗಿ ಜಪಿಸುವ ಮಂತ್ರ॥ ಸಲೋದಿಯೊಳು ನಿಂದು। ಸಾರಿ ಪೊಗಳುವ ಮಂತ್ರ ॥1॥ ಹಲವು ಮಂತ್ರ ಪಾಪಂಗಳು । ಹರಿಸುವ ಮಂತ್ರ॥ ಸುಲಭದಿಂದಲಿ ಸ್ವರ್ಗ ಸೂರೆಗೊಂಬುವ ಮಂತ್ರ । ಸ್ನಾನ ಮಾನಂಗಳಿಗೆ ಸಾಧನದ ಮಂತ್ರ। ಏನೆಂಬೆ ವಿಭೀಷಣನಿಗೆ ಪಟ್ಟ ಕಟ್ಟಿದ ಮಂತ್ರ॥ ಸಕಲ ವೇದಂಗಳಿಗೆ ಸಾರವೆನಿಪ ಮಂತ್ರ। ಮುಕ್ತಿಮಾರ್ಗಕ್ಕಿದು ಮೂಲ ಮಂತ್ರ॥ ಭಕ್ತಿಮಾರ್ಗಕ್ಕಿದು। ದಾರಿ ತೋರುವ ಮಂತ್ರ ಭಕ್ತವತ್ಸಲ ಪುರಂದರ ವಿಠಲನ ಮಂತ್ರ ॥5॥

CC-O. In Public Domain. Digitized by eGangotri

ತೃತೀಯ ಭಾಗ

ರಾಮಧ್ಯಾನಾಸಕ್ತನಾಗಿ ಹೊರಟ ನಾರಾಯಣಭಟ್ಟನು ಮಗಳನ್ನು ಹೆಗಲ ಮೇಲೆ ಹೊತ್ತುಕೊಂಡು ಹೆಜ್ಜೆಹೆಜ್ಜೆಗೂ ರಾಮಧ್ಯಾನ ಮಾಡುತ್ತಾ ಹೋಗುತ್ತಿರಲು ಎದುರಾಗಿ ಬಂದ ಯೌವನಸ್ತರುಗಳನನು ಈ ಕೆಳಗೆ ಕಂಡಂತೆ ಪ್ರಶ್ನಿಸಿದನು.

ಅಯ್ಯಾ ಈ ನನ್ನ ಮಗಳನ್ನು ಪಾಣಿಗ್ರಹಣ ಮಾಡಿಕೊಳ್ಳುವಿರಾ ?

೧ನೇ ಯೌವನಸ್ಥ - ಸ್ವಾಮಿ ! ನನಗೆ ಓರ್ವ ಪತ್ನಿಯಿರುವಳು, ನಾನು ಏಕಪತ್ನೀವ್ರತಸ್ಥನು, ಆದ್ದರಿಂದ ಲಗ್ನವಾಗಲಾರೆನು.

೨ನೇ ಯೌವನಸ್ಥ - ಅಯ್ಯಾ ! ನನಗಿರುವ ಒಬ್ಬ ಹೆಂಡತಿಯನ್ನೇ ಸಾಕುವುದು ಬಹಳ ಕಷ್ಟವು. ಈ ಹುಡುಗಿಯನ್ನು ಹೇಗೆ ಮದುವೆ ಮಾಡಿಕೊಳ್ಳಲಿ ! ಆಗಲಾರದು.

ನಾರಾಯಣಭಟ್ಟ - ಆಹಾ ! ವಿಧಿಯೇ ! ನಾನಾಗಿ ಹೆಣ್ಣನ್ನು ಕೊಡಲು ಹೋದರೂ ಬೇಡವೆನ್ನುವರಲ್ಲಾ ! ಇದೇನು ವಿಚಿತ್ರ ! ಇದೆಲ್ಲವು ರಾಮ ಮಾಯೆ! ಎಂದು ಮುಂದೆ ಹೋಗುತ್ತಿರಲು ಒಂದು ಗ್ರಾಮವು ಸಿಕ್ಕಿತು. ಮುಂಭಾಗದಲ್ಲಿ ಅನೇಕ ಮಂದಿ ಬ್ರಾಹ್ಮಣರು ಸೇರಿ ಮಂತ್ರಘೋಷಗಳಿಂದ ಭಗವಂತನನ್ನು ಆರಾಧಿಸುತ್ತಾ ಯಜ್ಞಮಾಡುವುದನ್ನು ಕಂಡು, ''ಅಯ್ಯಾ ವಟುಗಳೇ ! ನಾನು ಶ್ರೀ ರಾಮ ಸಂದರ್ಶನಕ್ಕಾಗಿ ಬಹಳ ದೂರ ಸಂಚರಿಸಬೇಕಾಗಿರುವುದು. ಈ ನನ್ನ ಮಗಳನ್ನು ಅಷ್ಟು ದೂರ ಆಹಾರಾದಿಗಳಿಲ್ಲದೆ ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಭೂತ ದಯಾಪರರಾದ ನಿಮ್ಮಲ್ಲಿ ಯಾರಾದರೂ ಈಕೆಯನ್ನು ಮದುವೆಯಾಗುವಿರಾ ?'' ಎಂದು ಕೇಳಿದನು. ಆದಕ್ಕೆ ಕೆಲವರು ನಾವು ಮಾಡಿಕೊಳ್ಳುವುದಿಲ್ಲ ತಾವು ಮಾಡಿಕೊಳ್ಳುವುದಿಲ್ಲವೆಂದರು. ಸ್ವಲ್ಪದೂರದಲ್ಲಿ ಕುಳಿತಿದ್ದ ಪ್ರಾಪ್ತವಯಸ್ಕನಾದ ಬ್ರಾಹ್ಮಣನೊಬ್ಬನು ಈತನ ಮಾತುಗಳನ್ನು ಕೇಳಿಸಿಕೊಂಡು ಅಯ್ಯಾ ! ಬ್ರಾಹ್ಮಣನೇ ! ನೀನಾಗಿ ಹೆಣ್ಣು ಕೊಡುತ್ತೇನೆಂದು ಹೇಳುವಾಗ ಮದುವೆ ಮಾಡಿಕೊಳ್ಳದಿರುವುದೇಕೆ ? ಮನೆಗೆ ಬಂದ ಹೆಣ್ಣನ್ನು ಬಿಡಬಾರದೆಂದು ಪೂರ್ವಿಕರು ಹೇಳಿರುವರು. ಈಕೆಯು ನನ್ನ ಭಾಗ್ಯಲಕ್ಷ್ಮಿಯು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಮಗಳನ್ನು ನನಗೆ ಪ್ರಾಣಗ್ರಹಣ ಮಾಡಿಕೊಟ್ಟು ತಮ್ಮ ಮಂದಿನ ಕಾರ್ಯಕ್ಕೆ ಹೊರಡಬಹುದೆಂದು ಹೇಳಲು, ನಾರಾಯಣಭಟ್ಟನು ಬಹಳ ಸಂತೋಷಪಟ್ಟು, ಮುಂಭಾಗದಲ್ಲಿ ಹರಿಯುತ್ತಿದ್ದ ಮಂದಾಕಿನೀ ನದಿಯಲ್ಲಿ ವಧೂ-ವರರಿಗೆ ಮಂಗಳಸ್ನಾನ ಮಾಡಿಸಿ, ಪಾಣಿಗ್ರಹಣವಾಗುವ ವೇಳೆಗೆ ಸರಿಯಾಗಿ ಇವನ ನಿಶ್ಚಲಭಕ್ತಿಗೆ ಮೆಚ್ಚಿ ಲಕ್ಷ್ಮಿ, ಪಾರ್ವತಿ, ಸರಸ್ವತಿ, ಮೊದಲಾದ ದೇವತಾ ಸ್ತ್ರೀಯೆಲ್ಲರೂ ನೆರೆದು ಪಾಣಿಗ್ರಹಣವನ್ನು ಸಾಂಗವಾಗಿ ನೆರವೇರಿಸಿ ಹೊರಟು ಹೋದರು. ನಂತರ ತಾನು ಆಚರಿಸುತ್ತಾ ಇದ್ದ ಶನಿವಾರ ಶ್ರೀರಾಮಕಥಾ ಪೂಜೆಯನ್ನು ತನ್ನ ಮಗಳಿಗೂ ಉಪದೇಶಿಸಿ ಅದನ್ನು ತಪ್ಪದೆ ಆಚರಿಸುವಂತೆ ಬುದ್ಧಿವಾದವನ್ನು ಹೇಳಿ ತನ್ನ ಮುಂದಿನ ಕಾರ್ಯಕ್ಕಾಗಿ ಪ್ರಯಾಣ ಮಾಡಿದನು.

೧. ಕುರುಡನಿಗೆ ಶ್ರೀರಾಮಕಥಾ ಉಪದೇಶ

ನಾರಾಯಣಭಟ್ಟನು ತನ್ನ ಮಗಳಿಗೆ ವಿವಾಹ ಮಾಡಿ, ಮುಂದೆ ಪ್ರಯಾಣ ಮಾಡುತ್ತಿರಲು ಒಂದು ಗ್ರಾಮದ ಬಳಿ ಹೊಲದ ಬದುವಿನಲ್ಲಿ ಒಬ್ಬ ಕುರುಡನು ದಪ್ಪವಾದ ಒಂದು ದೊಣ್ಣೆಯನ್ನು ಹಿಡಿದುಕೊಂಡು ಠಪ್ ಠಪ್ ಎಂದು ಶಬ್ದ ಮಾಡುತ್ತಿದ್ದುದನ್ನು ನೋಡಿ, ಇದರ ಕಾರಣವೇನಿರಬಹುದೆಂಬುದನ್ನು ತಿಳಿಯೋಣವೆಂದು ಯೋಚಿಸಿ, ಅವನ ಬಳಿಗೆ ಬಂದು ಮಾತನಾಡ ತೊಡಗಿದನು.

ನಾರಾಯಣಭಟ್ಟ - ಅಯ್ಯಾ ! ಮುದಕನೇ ! ಇದೇಕೆ ಹೀಗೆ ಶಬ್ದವನ್ನು ಮಾಡುತ್ತಾ ಕುಳಿತಿರುವೆ, ಅದರ ಅಭಿಪ್ರಾಯವೇನು ?

ಮುದುಕ - ಸ್ವಾಮಿ ! ನೀವ್ಯಾರೋ ಮಾನೀಯರಿರುವಂತೆ ಕಾಣುತ್ತೆ. ರೌಪ್ಯ ಇಂಗೆ ಪಕ್ಕದಾಗೆ ಕುಳಿತುಕೊಳ್ಳಿ ಬುದ್ಧಿ ನನ್ನ ವಿಷಯ ಹೇಳುತ್ತೇನೆ, (ಎಂದು ತನ್ನ ಬಲಗೈಯಿಂದ ಸ್ಥಳವನ್ನು ತೋರಿಸಿ ಕೂಡುವಂತೆ ಹೇಳಿದನು) ಬುದ್ಧಿ ! ಕೂತ್ಕೊಂಡಿರಾ ?

ನಾರಾಯಣ ಭಟ್ಟ - ಕೂತುಕೊಂಡೆ, ನಿನ್ನ ಚರಿತ್ರೆಯನ್ನು ಹೇಳು.

ಮುದುಕ - ಬುದ್ಧಿ ನಾನೇನ್ಹೇಳಲಿ ! ನಾನು ಹುಟ್ಟು ಕುರ್ದ ಬುದ್ಧಿ, ಎರ್ಡು ಕಣ್ಣು ಕಾಣೋಕ್ಕಿಲ್ಲ. ನನ್ನ ಹೆಂಡ್ರೋ, ಮಕ್ಕೋ ಯಾರಾದ್ರೂ ಒಬ್ರು ನನ್ನ ಇಲ್ಗೆ

CC-O. In Public Domain. Digitized by eGangotri

ಕರ್ಕೊಂಡ್ಬಂದು ಬಿಡ್ತಾರೆ. ಅವರಿಗೆ ಯಾವಾಗ ಜ್ಞಾನ ಬರ್ತೈತೋ ಆಗ ಮನೆಗೆ ಹೋಗಿ ಊಟ ಮಾಡಿ ಮಲ್ಕೋತ್ತೇನೆ ಬುದ್ಧಿ, ನನಗೇನೂ ಹಗಲಿಲ್ಲ, ರಾತ್ರಿಯಿಲ್ಲ, ಎಲ್ಲಾ ಒಂದೇ, ನಿದ್ದೆ ಬಂದ್ರೆ ರಾತ್ರಿ, ಎಚ್ಚರವಾಗಿದ್ರೆ ಹಗಲು ಬುದ್ಧಿ! ತಿಳಿದುಕೊಂಡ್ರಾ ನನ್ನ ಚರಿತ್ರೆಯಾ!

ನಾರಾಯಣಭಟ್ಟ - ಅಯ್ಯಾ! ಮುದುಕನೇ, ನಿನ್ನ ಚರಿತ್ರೆಯು ಚೆನ್ನಾಗಿ ತಿಳಿಯಿತು. ನಿನಗೆ ಶ್ರೀರಾಮಕಥಾ ಮತ್ತು ರಾಮನಾಮ ಮಹಿಮೆಯನ್ನು ಉಪದೇಶಿಸುವೆನು. ಅದರಂತೆ ಆಚರಿಸು ಎಂದು ಹೇಳಿ ಮುಂದುವರೆದನು. ಮುದುಕನು ಅದರಂತೆ ರಾಮ! ರಾಮ! ನನ್ನ ಕಣ್ಣುಗಳು ಬರಲಿ ಎಂದು ಹೇಳುತ್ತಿರಲು, ಕಣ್ಣುಗಳು ಬಂದವು. ನಂತರ ಮುದುಕನು ರಾಮನಾಮ ಚಿಂತನೆಯಿಂದ ಮನೆಗೆ ಹೋಗಿ ಬಾಗಿಲನ್ನು ತಟ್ಟಿ ಹೆಂಡತಿಯನ್ನು ಕೂಗಿದನು. ಒಳಗಿದ್ದ ಆತನ ಹೆಂಡತಿಯು ಇದೇನು! ಈ ದಿನ ನನ್ಗಂಡ ಇಷ್ಟೊತ್ತಿಗೇನೆ ಮನೆಗೆ ಬಂದನಲ್ಲ! ಯಾರು ಕರಕೊಂಡು ಬಂದವ್ರೇ ಎಂದು ಗಾಬರಿಯಾಗಿ ಒಳಗಿಂದ ಓಡಿಬಂದು ಬಾಗಿಲನ್ನು ತೆಗೆದಳು.

ಮುದುಕನ ಹೆಂಡತಿ - ಇದೇನು ನಿನಗೆ ಇಷ್ಟು ಬೇಗ ಕಣ್ಣೆಂಗೆ ಬಂದ್ವು?

ಮುದುಕ - ಏನೋ, ಯಾರೋ ಬ್ರಾಹ್ಮಣರು ಬಂದಿದ್ರು, ನಿನಗೆ ರಾಮನ ಉಪದೇಶ ಮಾಡ್ತೇನೆಂದ್ಹೇಳಿ "ರಾಮ ರಾಮ! ನನ್ಗೆಕಣ್ಣುಗಳು ಬರಲಿ" ಎಂದು ಹೇಳಿಕೊಟ್ಟರು. ಅಗಂನ್ತಿದ್ದಾಗೇ ಎರಡು ಕಣ್ಣುಗಳೂ ಬಂದವು. ಅವರನ್ನೇ ಮನೆಗೆ ಬನ್ನಿ ಅಂತ ಕರ್ದೆ ಈಗಾಗೋಕಿಲ್ಲ ಎಂದ್ಹೇಳಿ ಒರಟೋದ್ರು, ಇನ್ಮುಂದೆ ನಾವು ಅವರೇಳಿರುವ ಪೂಜೆಯನ್ನು ಮಾಡ್ಕೊಂಡು ಸುಖವಾಗಿರೋಣ ವೆಂದ್ಹೇಳಿ, ಅಂದಿನಿಂದಲೂ ಮುದುಕನು ಅವನ ಹೆಂಡತಿ ಮಕ್ಕಳೊಂದಿಗೆ ಶ್ರೀರಾಮಪೂಜೆಯನ್ನು ಭಕ್ತಿಯಿಂದ ಮಾಡುತ್ತಾ ನಾರಾಯಣಭಟ್ಟನ ಪುನಃ ಬರುವಿಕೆಯನ್ನು ನಿರೀಕ್ಷಿಸುತ್ತಾ ರಾಮಧ್ಯಾನದಲ್ಲಿ ಆಸಕ್ತನಾದನು.

೨. ಅವಿವಾಹಿತ ಕನ್ಯೆಗೆ ಶ್ರೀರಾಮ ಮಹಿಮೋಪದೇಶ

ಮುದುಕನಿಗೆ ಶ್ರೀರಾಮಕಥೆಯನ್ನು ಉಪದೇಶಿಸಿ ಮುಂದಕ್ಕೆ ಹೊರಟ ನಾರಾಯಣಭಟ್ಟನು ಮತ್ತೊಂದು ಗ್ರಾಮದ ಮುಂಭಾಗದಲ್ಲಿ ಅಶ್ವತ್ಥಕಟ್ಟೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಓರ್ವ ಅವಿವಾಹಿತ ಕನ್ಯೆಯು ಚಿಂತಾಕ್ರಾಂತಳಾಗಿ ಕುಳಿತಿರುವುದನ್ನು ಕಂಡು ಮಾತಾಡತೊಡಗಿದನು.

ನಾರಾಯಣಭಟ್ಟ - ಎಲೈ ಬಾಲೆಯೇ ! ಇದೇಕೆ ಹೀಗೆ ವ್ಯಸನಪಡುತ್ತಿರುವೆ, ಕಾರಣವೇನು ?

ಕನ್ಯೆ - ಪೂಜ್ಯರೇ ! ನಾನು ಅವಿವಾಹಿತಳು. ನನ್ನ ಮಾತಾಪಿತೃಗಳು. ನನಗೆ ಸರಿಯಾದ ವರವನ್ನು ಹುಡುಕದೇ ಒಬ್ಬ ವೃದ್ಧನಿಗೆ ಕೊಟ್ಟು ವಿವಾಹ ಮಾಡಬೇಕೆಂದು ಮನೆಯಲ್ಲಿ ಮಾತನಾಡಿಕೊಳ್ಳುತ್ತಿರುವರು. ಇದೇ ಈಗ ಬಂದಿರುವ ತೊಂದರೆ.

ನಾರಾಯಣಭಟ್ಟ - ಕನ್ಯೆಯೇ ! ಚಿಂತಿಸಬೇಡ. ಆತನನ್ನು ನೀನು ಖಂಡಿತ ಲಗ್ನವಾಗುವುದಿಲ್ಲ. ನಿನಗೆ ಅನುಕೂಲವಾದ ಪತಿಯೇ ಸಿಕ್ಕುವನು. ಅದುವರೆಗೂ ನೀನು, ನಾನು ಉಪದೇಶಿಸುವ ಶ್ರೀರಾಮಕಥಾ ಮತ್ತು ಪೂಜೆಯನ್ನು ಪ್ರತಿ ಶನಿವಾರವೂ ತಪ್ಪದೆ ಆಚರಿಸುತ್ತಿರು ಎಂದು ಹೇಳಿ ಮುಂದಕ್ಕೆ ಹೊರಟನು.

ಬಾಲೆಯು ತನಗೆ ಅನುಕೂಲವಾದ ಪತಿಯು ಸಿಕ್ಕುವನೆಂಬ ಆಸೆಯಿಂದ ಶ್ರೀರಾಮಪೂಜಾಸಕ್ತಳಾಗಿದ್ದಳು. ಅಂದಿನ ರಾತ್ರಿ ಆ ಕನ್ಯೆಯ ಸ್ವಪ್ನದಲ್ಲಿ ಶ್ರೀರಾಮ ದರ್ಶನವಾಗಿ ''ಎಲೈ ಬಾಲೆಯೇ ! ನಿನಗೆ ಶ್ರೀರಾಮ ಮಹಿಮೋಪದೇಶವನ್ನು ಮಾಡಿದ ಬ್ರಾಹ್ಮಣನು ಪುನಃ ನಿನ್ನಲ್ಲಿಗೆ ಬರುವನು. ಅವನೇ ನಿನಗೆ ಸರಿಯಾದ ಪತಿಯು, ಅವನನ್ನು ವಿವಾಹವಾಗು, ನೀನು ಧನ್ಯಳಾಗುವೆ'' ಎಂದು ಹೇಳಿ ಮಾಯವಾದನು.

೩. ವೃದ್ಧಸ್ತ್ರೀಗೆ ಶ್ರೀರಾಮ ಮಹಿಮೋಪದೇಶ

ಈ ಪ್ರಕಾರ ಮುಂದೆ ಬರುತ್ತಿರಲು ಮತ್ತೊಂದು ಗ್ರಾಮದ ಮುಂಭಾಗದ ಅಶ್ವತ್ಥ ಕಟ್ಟೆಯ ಮೇಲೆ ಚಿಂತಾಕ್ರಾಂತಳಾಗಿ ಕುಳಿತಿದ್ದ ಓರ್ವ ವೃದ್ಧ ಸ್ತ್ರೀಯನ್ನು ಕಂಡು ಮಾತನಾಡಿಸತೊಡಗಿದನು.

ನಾರಾಯಣಭಟ್ಟ - ಎಲೈ ವೃದ್ಧಳೇ ! ಏಕೆ ಚಿಂತಿಸುತ್ತಿರುವೆ ?

ವೃದ್ಧಸ್ತ್ರೀ - ಎಲೈ ಬ್ರಾಹ್ಮಣನೇ ! ಬಡತನದಿಂದ ಜೀವನೋಪಾಯಕ್ಕೆ ಕಷ್ಟವಾಗಲು ನನ್ನ ಪತಿಯು ಮೂರು ತಿಂಗಳ ಹಿಂದೆ ಕಾಶೀಯಾತ್ರೆಗೆ

CC-O. In Public Domain. Digitized by eGangotri

ಹೋದರು. ಏಕಮಾತ್ರ ಪುತ್ರನು ಭಿಕ್ಷಾಟನೆಗೆ ಹೋಗಿರುವನು. ಪತಿಚಿಂತನೆ, ದಾರಿದ್ರ್ಯ ಚಿಂತನೆಯಿಂದ ಕುಳಿತಿರುವೆನು.

ನಾರಾಯಣಭಟ್ಟ - ವೃದ್ಧಳೇ ! ಚಿಂತಿಸುವುದರಿಂದ ಪ್ರಯೋಜನವಿಲ್ಲ, ನಾನು ಉಪದೇಶಿಸುವ ಶ್ರೀರಾಮಕಥಾ ಮತ್ತು ಪೂಜೆಯನ್ನು ಪ್ರತಿ ಶನಿವಾರವೂ ತಪ್ಪದೆ ಆಚರಿಸು - ಸರ್ವದಾ ರಾಮಧ್ಯಾನ ಮಾಡು. ಇದರಿಂದ ಅಭೀಷ್ಟವೆಲ್ಲವೂ ಸಿದ್ಧಿಸುವುದು ಎಂದು ಹೇಳಿ ಮುಂದುವರೆದನು.

ವೃದ್ಧಳು ಈತನ ಉಪದೇಶದಂತೆ ರಾಮಧ್ಯಾನ ಮಾಡುತ್ತಿರಲು, ಕಾಶೀಯಾತ್ರೆಗೆ ಹೋಗಿದ್ದ ಪತಿಯು ಗಂಗಾಸಮೇತನಾಗಿ ಆ ದಿನವೇ ಮನೆಗೆ ಬಂದರು. ಆಗ ಆತನ ಸತಿಯು ಪತಿಯೇ, ಈಗ ತಾನೇ ಓರ್ವ ಬ್ರಾಹ್ಮಣನು ರಾಮಕಥಾ ಪೂಜೆ ಮತ್ತು ಶ್ರೀರಾಮಮಹಿಮೆ ಉಪದೇಶಿಸಿದನು. ಇಷ್ಟು ದಿನ ಬಾರದಿದ್ದವರು ಈ ದಿನ ಬಂದುದು ಆಶ್ಚರ್ಯವು ! ತಡೆಮಾಡದೆ ಶ್ರೀರಾಮಪೂಜೆ ಮಾಡೋಣವೆಂದು ನಿಶ್ಚಯಿಸಿ ಪೂಜಾ ಸಾಮಾಗ್ರಿಗಳನ್ನು ಸಂಗ್ರಹಿಸಿಕೊಂಡು ಸಾಂಗವಾಗಿ ಪೂಜೆ ಮಾಡಿ ಪ್ರಸಾದವನ್ನು ಸ್ವೀಕರಿಸಿ, ಭಿಕ್ಷಾಟನೆಗೆ ಹೋಗಿದ್ದ ಮಗನನ್ನು ನಿರೀಕ್ಷಿಸುತ್ತಿದ್ದರು.

ಇತ್ತ ಭಿಕ್ಷಾನ್ನಕ್ಕೆ ಹೋದ ಹುಡಗನು, ಪ್ರತಿದಿನ ಊರು ಮುಂದಿನ ಗಂಡಕೀ ನದಿಯಲ್ಲಿ ತಾನು ತಂದ ಅನ್ನವನ್ನು ಗಂಗಾಮಾತೆಗೆ ಪೂಜಿಸಿ, ನೈವೇದ್ಯ ಮಾಡಿ ಬರುವ ವಾಡಿಕೆ. ಅದರಂತೆ ಬಾಲಕನು ಪೂಜಾಸಕ್ತನಾಗಿರಲು ಆ ಊರಿನ ರಾಜನು ಮೃತಪಟ್ಟು 12 ದಿನಗಳು ಕಳೆದಿರಲು ಅಲ್ಲಿನ ಸಾಮಂತ ರಾಜರು ಪದವಿಗಾಗಿ ತಮ್ಮ ತಮ್ಮಲ್ಲಿ ಜಗಳವಾಡುತ್ತಿರಲು, ರಾಜ ಮನೆತನದ ಮುಖಂಡರೆಲ್ಲರೂ ಒಂದು ಸಭೆ ಏರ್ಪಡಿಸಿ ಪಟ್ಟದಾನೆಯ ಕೈಲಿ ಹೂವಿನ ಹಾರ ಕೊಟ್ಟು ಅದು ಆ ಹಾರವನ್ನು ಯಾರ ಕೊರಳಿಗೆ ಹಾಕುವುದೋ ಅವರಿಗೆ ರಾಜ್ಯ ದ ಪಟ್ಟ ಕಟ್ಟೋಣವೆಂದು ತೀರ್ಮಾನಿಸಿಕೊಂಡು ಅದರಂತೆಯೇ ಪಟ್ಟದಾನೆಯ ಸೊಂಡಲಿಗೆ ಹಾರವನ್ನು ಕೊಡಲು, ಆನೆಯು ಉತ್ಸಾಹಕರಾಗಿದ್ದ ಸಭೆಯಲ್ಲಿದ್ದವರೆಲ್ಲರನ್ನೂ ಬಿಟ್ಟು ಈ ಬಾಲಕನ ಕೊರಳಿಗೆ ಹಾರವನ್ನು ಹಾಕಿ ಬೆನ್ನಿನ ಮೇಲೆ ಕೂರಿಸಿಕೊಂಡು ಸಭೆಗೆ ಬಂದಿತು. ಈ ಭಿಕ್ಷಾನ್ನದ ಹುಡುಗನನ್ನು ನೋಡಿದ ಕೂಡಲೇ ಸಭೆಯಲ್ಲಿ ನೆರದಿದ್ದ ಸಾಮಂತ ರಾಜರೆಲ್ಲರೂ ಅತ್ಯಂತ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೋಪಗೊಂಡವರಾಗಿ,ಆ ಹುಡಗನನ್ನು ಗ್ರಾಮದ ಒಂದು ಬೆಟ್ಟದ ಪೊದೆಯಲ್ಲಿ ಅವಿತಿಟ್ಟು, ಆನೆಯನ್ನು ಬಹಳವಾಗಿ ಹೊಡೆದು ಪುನಃ ಆನೆಯ ಸೊಂಡಲಿಗೆ ಮತ್ತೊಮ್ಮೆ ಹಾರವನ್ನು ಕೊಡಲು ಆಗ ಆನೆಯು ಈ ರಾಜರೆಲ್ಲರನ್ನೂ ಧಿಕ್ಕರಿಸಿಕೊಂಡು ಹೋಗಿ ಪೊದೆಯಲ್ಲಿ ಅವಿತಿಟಿದ್ದ ಬಾಲಕನಿಗೆ ಆ ಹಾರವನ್ನು ಹಾಕಿ ಬೆನ್ನಿನ ಮೇಲೆ ಕೂಡಿಸಿಕೊಂಡು ಸಭೆಗೆ ಬಂದಿತು. ಆಗ ರಾಣಿಯು ಭಗವಂತನ ಮಾಯೆಯಲ್ಲಿ ಭಿಕ್ಷಾನ್ನ ಬಾಲಕನು ರಾಜನಾಗಬೇಕೆಂದಿದ್ದಲ್ಲಿ ಅದು ದೈವ ಸಂಕಲ್ಪವಾದುದರಿಂದ ಈತನೇ ರಾಜಪದವಿಗೆ ಅರ್ಹನು ಎಂದಳು.

ಶ್ಲೋಕ।। ರಂ ಕಂ ಕರೋತಿ ರಾಜಾನಾಂ ರಾಜಾನಾಂ ರಂಕಮೇವ ಚ
ಧನಿಕಂ ನಿರ್ಧನಂಚೈವ ನಿರ್ಧನಂ ಧನಿಕಂ ತಥಾ ।।

ಕೆಲಸಕ್ಕೆ ಬಾರದವನನ್ನು ರಾಜನನ್ನಾಗಿಯೂ, ರಾಜನನ್ನು ಕೆಲಸಕ್ಕೆ ಬಾರದವನನ್ನಾಗಿಯೂ, ಧನಿಕನ್ನು ಬಡವನನ್ನಾಗಿಯೂ, ಬಡವನನ್ನು ಧನಿಕನನ್ನಾಗಿಯೂ ಮಾಡುವುದು ಭಗವಂತನ ಲೀಲೆಯು.

ಆದ್ದರಿಂದ ಈತನಿಗೆ ಶಾಸ್ತ್ರೋಕ್ತವಾಗಿ ಪಟ್ಟವನ್ನು ಕಟ್ಟಬೇಕೆಂದು ಹೇಳಲು, ಸಾಮಂತ ರಾಜರೆಲ್ಲರೂ ಭಗವಂತನ ಮಾಯೆಗೆ ಆಶ್ಚರ್ಯಪಟ್ಟವರಾಗಿ, ಆ ಬಾಲಕನಿಗೆ ರಾಜ್ಯಪಟ್ಟಾಭಿಷೇಕವನ್ನು ಮಾಡಿದರು. ಸ್ತೋತ್ರಿಕರು ಸ್ತುತಿಯನ್ನೂ, ಸೇವಾದಳದವರು ಪರಾಕನ್ನೂ ಹೇಳಿದರು. ಸಾಮಂತ ರಾಜರು ನಜರನ್ನೊಪ್ಪಿಸಿದರು. ಪಟ್ಟಾಭಿಷೇಕವೆಲ್ಲವೂ ಸಾಂಗವಾಗಿ ನಡೆದ ನಂತರ ತನ್ನ ವೃದ್ಧ ಮಾತಾಪಿತರನ್ನು ರಾಜಮರ್ಯಾದೆಯಿಂದ ಕರೆತರುವಂತೆ ರಾಜಭಟರಿಗೆ ಆಜ್ಞಾಪಿಸಿದನು. ಆಜ್ಞೆಯಂತೆಯೇ ರಾಜಭಟರು ಆ ಬಾಲಕನ ಮಾತಾಪಿತೃಗಳನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಅರಮನೆಗೆ ಕರೆತರಲು, ರಾಜನು ತನ್ನವರನ್ನು ಮರ್ಯಾದೆಯಿಂದ ಪೂಜಿಸಿದನು. ಆಗ ಅವನ ತಾಯಿಯು ಸೆರಗಿನಲ್ಲಿ ಕಟ್ಟಿಕೊಂಡಿದ್ದ ಶ್ರೀರಾಮ ಪ್ರಸಾದವನ್ನು ಮಗನಿಗೆ ಕೊಟ್ಟು ''ಎಲೈ ಬಾಲಕನೇ ! ಈ ಪ್ರಸಾದದಿಂದಲೇ ನಿನಗೆ ರಾಜ್ಯಪದವಿಯುಂಟಾಯ್ತು. ಇದನ್ನು ಸ್ವೀಕರಿಸು. ರಾಮಧ್ಯಾನಪರಾಯಣನಾದ ಓರ್ವ ಬ್ರಾಹ್ಮಣನು ಈ ಶ್ರೀರಾಮಪೂಜೆ ಮತ್ತು ಮಹಿಮೆಯನ್ನು ಉಪದೇಶಿಸಿದನು. ಇದನ್ನು ನೀನು ಪ್ರತಿ ಶನಿವಾರವೂ ತಪ್ಪದೇ ಆಚರಿಸಬೇಕು''

CC-O. In Public Domain. Digitized by eGangotri

ಎಂದ್ದೇಳಲು ರಾಜನು ಬಹಳ ಸಂತೋಷಿಸಿ ಶ್ರೀರಾಮ ಕೃಪೆಯಿಂದುಂಟಾದ ಆ ರಾಜ್ಯಕ್ಕೆ ಅಂದಿನಿಂದಲೂ ರಾಮರಾಜ್ಯವೆಂತಲೂ, ತಾನು ರಾಮರಾಜನೆಂತಲೂ ಹೆಸರನ್ನಿಟ್ಟುಕೊಂಡು, ಆ ಬ್ರಾಹ್ಮಣನನ್ನು ಪತ್ತೆ ಮಾಡಲು ಅಷ್ಟ ದಿಕ್ಕುಗಳಿಗೆ ತನ್ನ ಸೇವಕರನ್ನು ಕಳುಹಿಸಿ ರಾಜ್ಯಭಾರ ಮಾಡಿಕೊಂಡು ಸದಾ ರಾಮಧ್ಯಾನ ಆಸಕ್ತನಾಗಿ ತನ್ನ ಮಾತಾಪಿತೃಗಳೊಂದಿಗೆ ಅನೇಕ ವರ್ಷಗಳು ಸುಖವಾಗಿದ್ದನು.

ಹೀಗೆಯೇ ಕೆಲವು ದಿನಗಳು ಕಳೆಯಲು, ರಾಮಭಕ್ತನಾದ ಈ ರಾಮರಾಜನಿಗೆ ರಾಣಿಯು ತನ್ನ ಮಗಳನ್ನು ಕೊಟ್ಟು, ವಿಧಿಪ್ರಕಾರ ವಿವಾಹವನ್ನು ಮಾಡಿ, ಮಗಳು, ಅಳಿಯನೊಂದಿಗೆ ಸುಖವಾಗಿದ್ದಳು.

೪. ನಾಗರಾಜನಿಗೆ ಶ್ರೀರಾಮ ಮಹಿಮೋಪದೇಶ

ಮುಂದುವರೆದ ನಾರಾಯಣಭಟ್ಟನು ರಾಮಧ್ಯಾನ ಪರಾಯಣನಾಗಿ ಬರುತ್ತಿರಲು ದಾರಿಯಲ್ಲಿ ಒಂದು ದೂಡ್ಡ ಸರ್ಪವು ಅಡ್ಡವಾಗಿರಲು, ಎಲೈ ನಾಗರಾಜನೇ ! ಇದೇಕೆ ದಾರಿಯಲ್ಲಿ ತಿರುಗಾಡುವ ಜನಗಳಿಗೆ ತೊಂದರೆಯೂ ಭೀತಿಯೂ ಉಂಟಾಗುವಂತೆ ಮಲಗಿರುವೆ ? ಕಾರಣವೇನು ?

ನಾಗರಾಜ – ಎಲೈ ಬ್ರಾಹ್ಮಣನೇ ! ನಾನು ಮಲಗಿರುವ ಈ ಸ್ಥಳದಲ್ಲಿ 108 ಕೊಪ್ಪರಿಗೆ ಹಣವಿರುವುದು. ಅದನ್ನು ಇಲ್ಲಿ ಕಾದುಕೊಂಡಿರುವಂತೆ ಶ್ರೀರಾಮನಾಜ್ಞೆಯಾಗಿರುವುದು. ಅದಕ್ಕಾಗಿ ಚಲಿಸದೆ ಜಡವಾಗಿ ಮಲಗಿರುವೆ. ನನ್ನನ್ನು ಈ ನಿರ್ಬಂಧದಿಂದ ಎಂದಿಗೆ ಬಿಡುಗಡೆ ಮಾಡುವನೋ ನಾ ಕಾಣೆ ?

ನಾರಾಯಣಭಟ್ಟ – ಹಾಗಾದರೆ ನಾನು ಉಪದೇಶಿಸುವ ಶ್ರೀರಾಮ ನಾಮ ಮಹಿಮೆಯನ್ನು ಜಪಿಸುತ್ತಿರು. ಇನ್ನು ಸ್ವಲ್ಪ ಕಾಲದಲ್ಲಿಯೇ ನಿನಗೆ ಈ ನಿರ್ಬಂಧವು ತಪ್ಪುವುದೆಂದ್ದೇಳಿ ಮುಂದೆ ಹೊರಟನು. ಅಂದಿನ ರಾತ್ರಿ ನಾಗರಾಜನಿಗೆ ಸ್ವಪ್ನದಲ್ಲಿ ಶ್ರೀರಾಮದರ್ಶನವಾಗಿ ''ಎಲೈ ನಾಗರಾಜನೇ ! ನಿನಗೆ ರಾಮೋಪದೇಶ ಮಾಡಿದ ಬ್ರಾಹ್ಮಣನು ಪುನಃ ನಿನ್ನಲ್ಲಿಗೆ ಬರುವನು, ಅವನಿಗೆ ನಿನ್ನಲ್ಲಿರುವ 108 ಕೊಪ್ಪರಿಗೆಯ ಹಣವನ್ನು ದಾನ ಮಾಡು, ಅಂದು ನೀನು ಮುಕ್ತನಾಗುವೆ'' ಎಂದ್ದೇಳಿ ಅಂತರ್ಧಾನನಾದನು.

Sri Vidyabharathi Book Centre, Sringeri

CC-O. In Public Domain. Digitized by eGangotri

೫. ರಾಜನಿಗೆ ಶ್ರೀರಾಮ ಮಹಿಮೋಪದೇಶ

ಮುಂದೆ ಹೊರಟ ನಾರಾಯಣಭಟ್ಟನು ಮತ್ತೊಂದು ಗ್ರಾಮದ ಕೆರೆಯ ಏರಿಯ ಮೇಲೆ ಅಲ್ಲಿಯ ರಾಜನು ಬಹಳ ಮಂದಿ ಕೂಲಿಗಾರರೊಂದಿಗೆ ಯೋಚನಾಕ್ರಾಂತನಾಗಿ ಕುಳಿತಿರುವುದನ್ನು ಕಂಡು ಎಲೈ ರಾಜನೇ, ನಿನ್ನ ಯೋಚನೆಗೆ ಕಾರಣವೇನು ? ಎಂದು ಕೇಳಿದನು.

ರಾಜ - ನರೋತ್ತಮನೇ ! ನಾನು ಈ ಕೆರೆಯ ಏರಿಯನ್ನು ಪ್ರತಿದಿನವೂ ಕೆಲಸಗಾರರಿಂದ ಕಟ್ಟಿಸಿ ಮನೆಗೆ ಹೋಗಿ ನಿದ್ರಿಸಿ ನಂತರ ಪ್ರಾತಃಕಾಲ ಬಂದು ನೋಡುವಲ್ಲಿ ಏರಿಯು ಒಡೆದು ನೀರು ದಿಕ್ಕಾಪಾಲಾಗಿರುವುದಲ್ಲಾ! ಇದರ ಕಾರಣವೇನೆಂಬುದನ್ನು ಯೋಚಿಸುತ್ತಿರುವೆನು.

ನಾರಾಯಣಭಟ್ಟ - ನಾನು ಉಪದೇಶಿಸುವ ಶ್ರೀರಾಮನಾಮ ಮಹಿಮೆಯನ್ನೂ, ಪೂಜೆ ಮತ್ತು ಕಥೆಯನ್ನೂ ಪ್ರತಿ ಶನಿವಾರವೂ ತಪ್ಪದೇ ಆಚರಿಸು. ನಿನ್ನ ಪ್ರಥಮ ಪೂಜೆಯ ದಿನವೇ ನಿನಗೆ ಚಿಂತಾ ಪರಿಹಾರಕ್ಕೆ ಸ್ವಪ್ನವಾಗುವುದು ಎಂದು ಹೇಳಿ ತಾನು ಮುಂದೆ ಹೊರಟನು.

ಈ ರಾಜನಿಗೆ ಪ್ರಥಮ ಶ್ರೀರಾಮ ಪೂಜೆಯ ದಿನ ರಾತ್ರಿ ಸ್ವಪ್ನದಲ್ಲಿ ಶ್ರೀರಾಮನು ಬಂದು ಎಲೈ ರಾಜನೇ ? ನಿನ್ನ ಋತುಮತಿಯಾದ ಮಗಳಿಗೆ ವಿವಾಹ ಮಾಡದಿರುವುದೇ ನಿನ್ನಕೆರೆಯ ಏರಿಯ ಒಡೆಯಲು ಕಾರಣವು. ನಿನಗೆ ನನ್ನ ಮಹಿಮೆಯನ್ನು ಉಪದೇಶಿಸಿದ ಬ್ರಾಹ್ಮಣನು ಪರಮ ಭಕ್ತನು, ಅವನು ಪುನಃ ನಿನ್ನಲ್ಲಿಗೆ ನನ್ನ ದರ್ಶನ ಮಾಡಿಕೊಂಡು ಬರುವನು; ಅವನಿಗೆ ನಿನ್ನ ಮಗಳನ್ನು ಕೊಟ್ಟು ಲಗ್ನ ಮಾಡು. ನಾಳೆಯಿಂದ ನಿನ್ನ ಕಾರ್ಯವು ಸಫಲವಾಗುತ್ತೆಂದು ಹೇಳಿ ಅಂತರ್ಧಾನನಾದನು.

ರಾತ್ರಿಯ ಸ್ವಪ್ನದಿಂದ ಬೆಳಿಗ್ಗೆ ಹೋಗಿ ಏರಿಯನ್ನು ನೋಡಲು ಯಾವ ಭಾಗವು ಒಡೆಯದಿರಲು, ಕೂಲಿಗಾರರೊಂದಿಗೆ ಸಂತೋಷಪಟ್ಟವನಾಗಿ ನಾರಾಯಣಭಟ್ಟನ ಬರುವಿಕೆಯನ್ನು ಎದುರು ನೋಡುತ್ತಾ ಈ ವೃತ್ತಾಂತವನ್ನು ತನ್ನ ಮಗಳಿಗೆ ತಿಳಿಸಲು, ಅವಳೂ ಸಹ ಆನಂದಭರಿತಳಾಗಿ ರಾಮಧ್ಯಾನಾಸಕ್ತಳಾಗಿ ತನ್ನ ವಿವಾಹವನ್ನು ನಿರೀಕ್ಷಿಸುತ್ತಿದ್ದಳು.

CC-O. In Public Domain. Digitized by eGangotri

ಚತುರ್ಥ ಭಾಗ

ಎಷ್ಟು ದಿನಗಳಾದರೂ ಶ್ರೀರಾಮನ ದರ್ಶನವಾಗದಿರಲು ನಾರಾಯಣ ಭಟ್ಟನು ಬಹಳ ಖಿನ್ನನಾಗಿ ಕನಕದಾಸರು ಶ್ರೀ ಕೃಷ್ಣನ ದರ್ಶನವಾಗದಿರಲು ಕೋಪಗೊಂಡು ಹಾಡಿದ ದೇವರ ನಾಮವನ್ನು ವರ್ಣಿಸುತ್ತಿರಲು -

ರಾಗ - ಕಾಂಬೋದಿ - ಝಂಪೆ ತಾಳ

ಆರು ಬದುಕಿದರಯ್ಯ ನಿನ್ನ ನಂಬಿ ।।ಪ।। ತೋರು ಈ ಜಗದೊಳಗೆ ಒಬ್ಬರನು ಕಾಣೆ ।।ಆ।। ಕಲಹ ಬಾರದ ಮುನ್ನ ಕರ್ಣನೊಬ್ಬನ ಕೊಂದೆ। ಸುಲಭದಲ್ಲಿ। ಕೌರವನ ಮನೆಯ ಮುಂದೆ।। ನೆಲವ ಬೇಡುತ ಪೋಗಿ ಬಲಿಯ ಭೂಮಿಗೆ ತುಳಿದೆ ।। ಪೊಲೆಯನುಣಿಸಲು ಪೂತನಿಯ ಕೊಂದೆ ।।1।। ಕರಪತ್ರದಿಂದ ತಾಮ್ರಧ್ವಜನ ತಂದೆಯ। ಕೊರಳ ಕುಯಿಸಿದೆ। ನೀನು ಕುಂದಿದಲ್ಲದೆ।। ದುರುಳನಂದದಿ ಪೋಗಿ ಭೃಗುಮುನಿಯ ಕಣ್ಣೊಡೆದೆ। ಅರಿತು ತ್ರಿಪುರಾಸುರನ ಹೆಂಡಿರನು ಬೆರೆದೆ।।2।। ತಿರಿದುಂಬ ದಾಸನ ಕೈಲಿ ಕಪ್ಪವ ಕೊಂಬೆ। ಗರುಡ ವಾಹನ ನಿನ್ನ ಚರಿಯವರಿಯೇ ।। ವರಕಾಗಿ ನೆಲೆಯಾದಿ ಕೇಶವನ ಭಜಿಸಿದರೆ ತಿರಿವೆನೆಂದರೆ ತಿರುಪೆ ಕೂಳ್ಹುಟ್ಟದೈ ಕೃಷ್ಣ।।3।।

ಇವನ ಭಕ್ತಿಗೆ ಮೆಚ್ಚಿದ ಶ್ರೀರಾಮನು ವೃದ್ಧ ಬ್ರಾಹ್ಮಣನ ರೂಪಿಯಾಗಿ ಬಂದು ''ಎಲೈ ಬ್ರಾಹ್ಮಣನೇ ! ನೀನು ಅರಣ್ಯದಲ್ಲಿ ತಿರುಗಲು ಕಾರಣವೇನು ?'' ಎಂದು ಕೇಳಿದನು.

ನಾರಾಯಣಭಟ್ಟ-ನಾನು ಶ್ರೀರಾಮನನ್ನು ಹುಡುಕಿಕೊಂಡು ಬಂದಿರುವೆನು.

ವೃದ್ಧಬ್ರಾಹ್ಮಣ - ಆ ಶ್ರೀರಾಮನು ನಾನೇ ! ನಿನಗೆ ಬೇಕಾದ ವರವನ್ನು ಕೇಳು.

ನಾರಾಯಣಭಟ್ಟ - ಸೀತಾಲಕ್ಷ್ಮಣ ಸಮೇತವಾದ ನಿನ್ನ ಸಂದರ್ಶನವೊಂದೇ ನನಗೆ ಸಾಕಾಗಿರುವುದು, ಮತ್ಯಾವ ವರವೂ ಬೇಕಾಗಿಲ್ಲವು.

ವೃದ್ಧಬ್ರಾಹ್ಮಣ - ಇವನನ್ನು ಹೆಚ್ಚಿಗೆ ಪರೀಕ್ಷಿಸಬೇಕಾದ ಪ್ರಮೇಯ ವಿಲ್ಲವೆಂದು ಭಾವಿಸಿ ತಾನು ಸೀತಾ, ಲಕ್ಷ್ಮಣ, ಭರತ, ಶತ್ರುಘ್ನ, ಆಂಜನೇಯ ಸಮೇತನಾಗಿ ಸಂದರ್ಶನವನ್ನೀಯಲು, ನಾರಾಯಣಭಟ್ಟನು ಬಾಷ್ಪಾನಂದವನ್ನು ಸುರಿಸುತಾ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ - ತಾಳ

ಇಂಧ ಪ್ರಭುವ ಕಾಣೆನೋ। ಈ ಜಗಮೊಳಗಿಂಥಾ ಪ್ರಭುವ ಕಾಣೆನೋ ॥ಪ॥ ಅಂಥಾ ಪ್ರಭುವ ಕಾಣೆ ॥ ಶಾಂತಿ ಮೂರುತಿ ಜಗದಂತಾ ರಂಗನು ಲಕ್ಷ್ಮೀಕಾಂತಾ ಸರ್ವಾಂತರ್ಯಾಮಿ ॥ಅ.ಪ॥ ಬೇಡಿದಿಷ್ಟಾವ ಕೊಡುವ। ಭಕ್ತರ ತಪ್ಪು ನೋಡಾದೆ ಬಂದು ಪೂರೆವ ಗಾಡಿಕಾರನು ಗರುಡಾರೂಢಾ ಗುಣವಂತ ಮಹಾಪ್ರೌಢಾಪ್ರತಾಪದಿ ಜಗದಿ ಗೂಢದಿ ಸಂಚಾರೀಪ। ಪಾಡಿ ಪೊಗಳಿ ಕೊಂಡಾಡುವರ। ಮುಂದಾಡುತಲಿಪ್ಪನು ನಾಡಿನೊಳಿದ್ದರು ಕೇಡಿಗನೇ ನಾಡಾಡಿಗಳಂದದಿ ಈಡುಂಟೆ ನೋಡಿ ವೆಂಕಟನೀಗೆ ॥೧॥ ಭಾರ್ಗವಾ ಭೂಮಿವಲ್ಲಭಾ ಭವದೂರ ಭಕ್ತವರ್ಗಕ್ಕೆ ಇವ ಸುಲಭಾ ನಿರ್ಗುಣಾಕಾರ। ಸ್ವರ್ಗದೈಶ್ವರ್ಯಕ್ಕಿಂತ ಅನರ್ಘ್ಯ ಸಂಪದವೀವ ದೀರ್ಘಾಯುವಂತನಾದ ಭಾರ್ಗವ ರಾಮ ನೃಪಾರ್ಗಳನ್ನೆಲ್ಲ ರಣಾಗ್ರದಿಜ್ಜೈಸಿದ ಉಗ್ರಪ್ರತಾಪ। ಸುರಾಗ್ರಗಣ್ಯ ಸದ್ವಿಗ್ರಹ।ಶ್ರೀ ಮದನುಗ್ರಹಮಾಡೆ। ಸುಗರ್ದವಕಡಿಪಾ ॥೨॥ ನಿರ್ದುಃಖಾನಂದಭರಿತಾ। ನಿರ್ವದ್ಯ ಸುಖ ಆರ್ದ್ರಾಹೃದಯಾ ತೋರುತ್ತಾ। ನಿದ್ರೆಯೊಳಿದ್ದವಗುಪದ್ರವ ಕೊಡಿಸಿನೀ ಕ್ಷುದ್ರಾದೈತ್ಯನ ಒಗೆದು ಸುಭದ ಜಗಕಿತ್ತಾ। ನಿರ್ದಯನದಲ್ಲಿ ಸಮುದ್ರಶಯನ ಲಕ್ಷ್ಮೀಜನಾರ್ದನರವರ ಶೇಷಾದ್ರಿ ನಿವಾಸ ॥೩॥

ಎಂದು ಸಾಷ್ಟಾಂಗ ಪ್ರಣಾಮ ಮಾಡಿ ''ಹೇ ! ದೇವಾ ! ಇಂದು ನನ್ನ ಜನ್ಮವು ಸಫಲವಾಯ್ತು. ನನ್ನ ಪೂತಾಪಿತೃಗಳ ಆಜ್ಞೆಯನ್ನು ನೆರವೇರಿಸಿದಂತಾಯಿತು. ನಾನು ಈ ಸ್ಥಳದಲ್ಲಿಯೇ ಅನ್ನ ಆಹಾರಾದಿಗಳನ್ನು ತೊರೆದು ನಿನ್ನ ಧ್ಯಾನಾಸಕ್ತನಾಗಿ ತಪಸ್ಸನ್ನಾಚರಿಸುವೆನೆನ್ನಲು, ''ಕಂದಾ! ಹಾಗೆನ್ನಬೇಡ, ನೀನು ಇನ್ನು ಕೆಲವು ಕಾಲ ಶ್ರೀರಾಮಮಹಿಮೆ, ಕಥೆ, ಪೂಜೆಗಳನ್ನು ಜನರಲ್ಲಿ ಉಪದೇಶಿಸುತ್ತಾ ಕಾಲ ಕಳೆಯುತ್ತಿರು. ಅಂತ್ಯದಲ್ಲಿ ನನ್ನನ್ನು ಸೇರುವೆ. ನೀನು ಯಾವ ರೀತಿಯಲ್ಲಿ ಯಾವ ಮಾರ್ಗದಲ್ಲಿ ಯಾರ್ಯಾರನ್ನು ಸಂಧಿಸಿ ನೇಮದಿಂದ ಬಂದೆಯೋ ಅದೇ ರೀತಿಯಲ್ಲಿ ಅದೇ ಮಾರ್ಗದಲ್ಲಿ ಅವರುಗಳನ್ನು ಸಂಧಿಸಿ ಹೋಗು, ನಿನ್ನ ಕಾರ್ಯಗಳೆಲ್ಲವೂ ಕೈಗೊಳ್ಳುವುದೆಂದು ಹೇಳಿ ಶ್ರೀರಾಮನು ಅಂತರ್ಧಾನನಾದನು. ಇಲ್ಲಿ ನಾರಾಯಣಭಟ್ಟನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಾಮ ಸಂದರ್ಶನವಾಗುತ್ತಲೇ ಕೇಶವಭಟ್ಟನ ಮನೆಯಲ್ಲಿ ಐಶ್ವರ್ಯವು ತುಂಬಿ ತುಂಬಿ ತುಳುಕಾಡುತ್ತಿತ್ತು. ಇದರ ಅಂತರ್ಯವನ್ನು ತಿಳಿದ ಕೇಶವಭಟ್ಟನು ತನ್ನ ಮಗನ ಆಗಮನವನ್ನು ನಿರೀಕ್ಷಿಸುತ್ತಿದ್ದನು.

ಪಂಚಮ ಭಾಗ

೧. ಶ್ರೀರಾಮನ ದರ್ಶನವನ್ನು ಪಡೆದು ಹಿಂತಿರುಗಿದ ನಾರಾಯಣಭಟ್ಟನು ಮೊದಲು ಕೆರೆಯ ಏರಿಯನ್ನು ಕಟ್ಟಿಸುತ್ತಿದ್ದ ರಾಜನ ಬಳಿಗೆ ಬರಲು ರಾಜನು ತನ್ನ ಸ್ವಪ್ನವೃತ್ತಾಂತವನ್ನು ಆತನಿಗೆ ಹೇಳಿ ಸಮಸ್ತ ರಾಜ ಮರ್ಯಾದೆಗಳಿಂದ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದನು.

೨. ನಂತರ ಪತ್ನೀ ಸಮೇತನಾಗಿ ರಾಜಭಟರೊಡನೆ ಅಲ್ಲಿಂದ ಹೊರಟು ಬರುತ್ತಿರಲು ಅಡ್ಡಲಾಗಿ ಬಿದ್ದಿದ್ದ ನಾಗರಾಜನು ಇವರನ್ನು ನೋಡುತ್ತಲೇ ಪೂಜ್ಯನೇ! ಇಂದಿಗೆ ನಾನು ಧನ್ಯನಾದೆನು. ಈ ಸ್ಥಳದಲ್ಲಿರುವ ೧೦೮ ಕೊಪ್ಪರಿಗೆ ಹಣವನ್ನು ನೀನು ಅನುಭವಿಸಲು ಶ್ರೀರಾಮನಾಜ್ಞೆ ಆಗಿರುವುದು. ಇದನ್ನು ಸ್ವೀಕರಿಸು, ಎಂದು ಹೇಳಿ ಮಾಯವಾದನು. ತನ್ನ ಭಟರೊಂದಿಗೆ ಆ ಹಣವನ್ನು ಒಂಟೆಗಳ ಮೇಲೆ ಹೊರಿಸಿಕೊಂಡು ಪತ್ನೀ ಸಮೇತನಾಗಿ ಬರುತ್ತಿದ್ದನು.

೩. ರಾಮರಾಜ್ಯದ ರಾಜನನ್ನು ಭೇಟಿ ಮಾಡಿಕೊಂಡು ಆತನ ವೃದ್ಧ ಮಾತಾ ಪಿತೃಗಳನ್ನು ಸಂಧಿಸಿ ಶ್ರೀರಾಮದರ್ಶನವನ್ನು ಅರುಹಿ ರಾಜನಿಂದ ಧನ, ಕನಕ, ವಸ್ತ್ರ ವಾಹನಾದಿ ಮರ್ಯಾದೆಗಳನ್ನು ಪಡೆದು ಮುಂದುವರೆದನು.

೪. ಹೀಗೆ ಬರುತ್ತಿರಲು ಈತನನ್ನು ನಿರೀಕ್ಷಿಸುತ್ತಿದ್ದ ಅವಿವಾಹಿತ ಕನ್ಯೆಯು ಈತನನ್ನು ನೋಡುತ್ತಲೇ ತನ್ನ ಸ್ವಪ್ನ ವೃತ್ತಾಂತವನ್ನು ತಿಳಿಸಲು, ಆ ಬಾಲೆಯ ಮಾತಾಪಿತೃಗಳ ಅಪೇಕ್ಷೆಯಂತೆ ಆಕೆಯನ್ನು ವಿವಾಹ ಮಾಡಿಕೊಂಡು ಮುಂದುವರೆದನು.

೫. ಹೀಗೆ ಬರುತ್ತಿರಲು ಕಣ್ಣು ಬಂದ ಗೌಡನು ಈತನನ್ನು ನೋಡಿ ಮಹನೀಯರೇ! ಇಂದು ದರ್ಶನ ಕೊಟ್ರಾ! ನಮ್ಮಪ್ಪನಡೀರಿ ಮನ್ಗೆ ಎಂದು ಹೇಳಲು, ಅವನ ಮನೆಯನ್ನು ಪ್ರವೇಶಿಸಿ, ಅಲ್ಲಿ ಮತ್ತೊಮ್ಮೆ ಶ್ರೀರಾಮಭಜನೆ ಮಾಡಿ ಅವನಿಂದ ಕಾಣಿಕೆಯನ್ನು ತೆಗೆದುಕೊಂಡು ರಾಮಪುರದಲ್ಲಿ ತಂದೆಯನ್ನು ನೆನೆಸಿಕೊಂಡು ಪೇಚಾಡುತ್ತಿದ್ದ ಮಗಳ ಮನೆಗೆ

CC-O. In Public Domain. Digitized by eGangotri

ಬಂದು, ಮಗಳನ್ನೂ ಅಳಿಯನನ್ನೂ ಜೊತೆಯಲ್ಲಿ ಕರೆದುಕೊಂಡು ರಾಜಮರ್ಯಾದೆಯಿಂದ ಸುರಪುರದ ಮುಂದೆ ಬಂದು, ತನ್ನ ಆಗಮನವನ್ನು ತನ್ನ ಮಾತಾಪಿತೃಗಳಿಗೆ ರಾಜಭಟರ ಮೂಲಕ ತಿಳಿಸಿ, ಪುರಮಧ್ಯದಲ್ಲಿ ಬಿಡಾರವನ್ನು ಏರ್ಪಡಿಸಿ, ಊರೆಲ್ಲವನ್ನು ತಳಿರುತೋರಣಗಳಿಂದ ಅಲಂಕರಿಸಿ ತನ್ನ ಪರಿವಾರದೊಂದಿಗೆ ಬಿಡಾರವನ್ನು ಸೇರಲು, ಅನನ್ಯ ಭಕ್ತಿಯಿಂದ ಊರಿನವರೆಲ್ಲರೂ ನಾರಾಯಣ ಭಟ್ಟನ ಪರಿವಾರದೊಂದಿಗೆ ಸೇರಿದವರಾಗಿ ಶ್ರೀರಾಮಪೂಜೆಯನ್ನು ಯಥಾವಿಧಿಯಾಗಿ ಆಚರಿಸಿ, ಕಥೆಯನ್ನು ಕರ್ಣಾನಂದವಾಗಿ ಕೇಳಿ, ಪ್ರಸಾದವನ್ನು ಭುಂಜಿಸಿ ಸರ್ವರೂ ಮೈಮರೆತು ರಾಮನಾಮ ಮಹಿಮೆಯನ್ನು ನುಡಿಯುತ್ತಿರಲು ಸೀತಾ, ಲಕ್ಷ್ಮಣ, ಭರತ, ಶತ್ರುಘ್ನ, ಹನುಮತ್ಸಮೇತನಾದ ಶ್ರೀರಾಮಚಂದ್ರನು ಸರ್ವರಿಗೂ ಪ್ರತ್ಯಕ್ಷನಾಗಿ ಭಕ್ತಶಿಖಾಮಣಿಗಳಿರಾ! ಈ ರಾಮಕಥೆ ಮತ್ತು ಮಹಿಮೆಯನ್ನು ಯಾರು ಪ್ರತಿ ಶನಿವಾರವೂ ತಪ್ಪದೆ ಆಚರಿಸುವರೋ, ಯಾರು ಪಠನ ಮಾಡುವರೋ ಅವರು ಮುಕ್ತಿಯನ್ನು ಹೊಂದುವರು. ನೀವುಗಳೆಲ್ಲರೂ ಇನ್ನೂ ಕೆಲವು ಕಾಲ ರಾಮಧ್ಯಾನ ಪರರಾಗಿದ್ದು ನಂತರ ನನ್ನ ವಾಸಸ್ಥಾನವಾದ ವೈಕುಂಠವನ್ನು ಸೇರುವಿರಿ ಎಂದು ಹೇಳಿ ಅಂತರ್ಧಾನನಾಗಲು, ಸರ್ವರೂ ಮಂಗಳವನ್ನು ಹಾಡಿ ಸೀತಾ ರಾಮರಾಜ್ಯವೆಂಬ ಸುರುಪುರದಲ್ಲಿ ಸುಖವಾಗಿದ್ದು ಮುಕ್ತಿಯನ್ನು ಪಡೆದರು.

ಮಂಗಳಂ

ಮಂಗಳವೆನ್ನೀ।। ಮಂಗಳವೆನ್ನೀ।। ತುಂಗಮಹಿಮೆ ತುರುಪಾಲಕಗೆ ।।ಪ।। ಮಂಗಳಾಂಗಾ ರಂಗನಾಥ ಗಂಗಾಜನಕ ಕೃಪಾಳಂಗನಿಗೆ ।।ಅ.ಪ।। ನೀರೋಳು ಭಾರವ ಪೊತ್ತೂ ಭೂಮಿಯನೆತ್ತಿ। ಪೋರಾನ ಸಲಹಿದ ಬಾಲಾಪರಶುಧರಗೇ।। ಶ್ರೀರಾಮಕೃಷ್ಣಾ ಬೌದ್ಧಕಲ್ಕಿ। ವೀರಾವತಾರದ ನರಹರಿಗೆ।। ಜೋಗುಳ ಪಾಡೀ ಜೋಗುಳ ಪಾಡೀ ಜಗದೊಡೆಯಾ ಶ್ರೀಹರಿಗೇ ಖಗವಾಹನ ಮುಕುಂ ಮುರಾರಿಗೇ। ಪನ್ನಗಶಾಯಿಗೆ ಜೋ ಜೋ ।।೨।। ಲಾಲಿಯ ಪಾಡಿ ಲಾಲಿಯ ಪಾಡಿ। ನೀಲಮೇಘವರ್ಣನಿಗೆ ಬಾಲಲೀಲೆಗಳ ತೋರುವ ಮುಕುಂದಶೀಲಾ ನಿತ್ಯಾನಂದ ವಿತಲಗೆ ।।೩।।

-: ಶ್ರೀರಾಮ ಮಹಿಮೆ ಸಂಪೂರ್ಣವು :-

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀರಾಮಾಷ್ಟೋತ್ತರ ಶತನಾಮಾವಳಿಃ

ಶ್ರೀರಾಮಾಯಾನಮಃ
ರಾಮಭದ್ರಾಯನಮಃ
ರಾಮಚಂದ್ರಯನಮಃ
ಶಾಶ್ವತಾಯನಮಃ
ರಾಜೀವಲೋಚನಾಯನಮಃ
ಶ್ರೀಮತೇನಮಃ
ರಾಜೇಂದ್ರಾಯನಮಃ
ರಘುಪುಙ್ಗವಾಯನಮಃ
ಜಾನಕೀವಲ್ಲಭಾಯನಮಃ
ಜೈತ್ರಾಯನಮಃ ೧೦
ಜೆತಾಮಿತ್ರಾಯನಮಃ
ಜನಾರ್ದನಾಯನಮಃ
ವಿಶ್ವಾಮಿತ್ರಪ್ರಿಯಾಯನಮಃ
ದಾನ್ತಾಯನಮಃ
ಶರಣ್ಯತ್ರಾಣತತ್ಪರಾಯನಮಃ
ವಾಲಿಪ್ರಮಥನಾಯನಮಃ
ವಾಗ್ಮಿನೇನಮಃ
ಸತ್ಯವಾಚೇನಮಃ
ಸತ್ಯವಿಕ್ರಮಾಯನಮಃ
ಸತ್ಯವ್ರತಾಯನಮಃ ೨೦
ವ್ರತಫಲಾಯ ನಮಃ
ಸದಾಹನುಮದಾಶ್ರಯಾಯನಮಃ
ಕೌಸಲೇಯಾಯನಮಃ
ಖರಧ್ವಂಸಿನೇನಮಃ
ವಿರಾಧವಧಪಣ್ಡಿತಾಯನಮಃ

ವಿಭೀಷಣಪರಿತ್ರಾತ್ರೇನಮಃ
ದಶಗ್ರೀವ ಶಿರೋಹರಾಯನಮಃ
ಸಪ್ತತಾಲಪ್ರಭೇತ್ತ್ರೇನಮಃ
ಹರಕೋದಣ್ಡಖಿಣ್ಡನಾಯನಮಃ
ಜಾಮದಗ್ನ್ಯಮಹಾದರ್ಪ -
ದಳನಾಯನಮಃ ೩೦
ತಾಟಕಾನ್ತಾಯನಮಃ
ವೇದಾನ್ತಪಾರಾಯನಮಃ
ವೇದಾತ್ಮನೇನಮಃ
ಭವರೋಗೈಕಭೇಷಜಾಯನಮಃ
ದೂಷಣತ್ರಿಶಿರೋಹಂನ್ತ್ರೇನಮಃ
ತ್ರಿಮೂರ್ತಯೇನಮಃ
ತ್ರಿಗುಣಾತ್ಮಕಾಯನಮಃ
ತ್ರಿವಿಕ್ರಮಾಯ ನಮಃ
ತ್ರಿಲೋಕಾತ್ಮನೇನಮಃ
ಪುಣ್ಯಚಾರಿತ್ರಕೀರ್ತನಾಯನಮಃ೪೦
ತ್ರಿಲೋಕರಕ್ಷಕಾಯನಮಃ
ಧನ್ವಿನೇನಮಃ
ದಣ್ಡಕಾರಣ್ಯವಾಸಕೃತೇನಮಃ
ಅಹಲ್ಯಾಪಾವನಾಯನಮಃ
ಪಿತೃಭಕ್ತಾಯನಮಃ
ವರಪ್ರದಾಯನಮಃ
ಜಿತೇಂದ್ರಿಯಾಯನಮಃ
ಜಿತಕ್ರೋಧಾಯನಮಃ
ಜೆತಾಮಿತ್ರಾಯನಮಃ

CC-O. In Public Domain. Digitized by eGangotri

ಜಗದ್ಗುರವೇನಮಃ ೫೦
ಋಕ್ಷವಾನರಸಂಘಾತಿನೇನಮಃ
ಚಿತ್ರಕೂಟಸಮಾಶ್ರಯಾಯನಮಃ
ಜಯಂತತ್ರಾಣವರದಾಯನಮಃ
ಸುಮಿತ್ರಾಪುತ್ರಸೇವಿತಾಯನಮಃ
ಸರ್ವದೇವಾಧಿದೇವಾಯನಮಃ
ಮೃತವಾನರಜೀವನಾಯನಮಃ
ಮಾಯಾ - ಮಾರೀಚಹನ್ತ್ರೇನಮಃ
ಮಹಾಭಾಗಾಯನಮಃ
ಮಹಾಭುಜಾಯನಮಃ
ಸರ್ವದೇವಸ್ತುತಾಯನಮಃ ೬೦
ಸೌಮ್ಯಾಯನಮಃ
ಬ್ರಹ್ಮಣ್ಯಾಯನಮಃ
ಮುನಿಸತ್ತಮಾಯನಮಃ
ಮಹಾಯೋಗಿನೇನಮಃ
ಮಹೋದರಾಯನಮಃ
ಸುಗ್ರೀವಸ್ಥಿರರಾಜ್ಯದಾಯನಮಃ
ಸರ್ವಪುಣ್ಯಾಧಿಕಫಲಾಯನಮಃ
ಸ್ಮೃತಸರ್ವಾಘನಾಶನಾಯನಮಃ
ಆದಿಪುರುಷಾಯನಮಃ
ಪರಮಪುರುಷಾಯನಮಃ ೭೦
ಮಹಾಪುರುಷಾಯನಮಃ
ಪುಣ್ಯೋದಯಾಯನಮಃ
ದಯಾಸಾರಾಯನಮಃ
ಪುರಾಣಪುರುಷೋತ್ತಮಾಯನಮಃ
ಸ್ಮಿತವಕ್ತ್ರಾಯನಮಃ
ಮಿತಭಾಷಿಣೇನಮಃ

ಪೂರ್ವ-ಭಾಷಿಣೇನಮಃ
ರಾಘವಾಯನಮಃ
ಅನನ್ತಗುಣಗಮ್ಭೀರಾಯನಮಃ
ಧೀರೋದಾತ್ತಗುಣೋತ್ತಮಾಯ
ನಮಃ ೮೦
ಮಾಯಾಮಾನುಷಚಾರಿತ್ರಾಯನಮಃ
ಮಹಾದೇವಾದಿ ಪೂಜಿತಾಯನಮಃ
ಸೇತುಕೃತೇನಮಃ
ಜಿತವಾರಾಶಯೇನಮಃ
ಸರ್ವತೀರ್ಥಮಯಾಯನಮಃ
ಹರಯೇನಮಃ
ಶ್ಯಾಮಾಂಗಾಯನಮಃ
ಸುಂದರಾಯನಮಃ
ಶೂರಾಯನಮಃ
ಪೀತವಾಸಸೇನಮಃ ೯೦
ಧನುರ್ಧರಾಯನಮಃ
ಸರ್ವಯಜ್ಞಾಧಿಪಾಯನಮಃ
ಯಜ್ವನೇನಮಃ
ಜರಾಮರಣವರ್ಜಿತಾಯನಮಃ
ಶಿವಲಿಂಗಪ್ರತಿಷ್ಠಾತ್ರೇನಮಃ
ಸರ್ವಾವಗುಣವರ್ಜಿತಾಯನಮಃ
ಪರಮಾತ್ಮನೇನಮಃ
ಪರಸ್ಮೈ ಬ್ರಹ್ಮಣೇನಮಃ
ಸಚ್ಚಿದಾನಂದ ವಿಗ್ರಹಾಯನಮಃ
ಪರಸ್ಮೈಜ್ಯೋತಿಷೇನಮಃ
ಪರಸ್ಮೈಧಾಮ್ನೇನಮಃ
ಪರಾಕಾಶಾಯನಮಃ

CC-O. In Public Domain. Digitized by eGangotri

ಪರಾತ್ಪರಸ್ಮೈನಮಃ	ಪಾರಾಯನಮಃ	
ಪರೇಶಾಯನಮಃ	ಸರ್ವದೇವಾತ್ಮಕಾಯನಮಃ	
ಪಾರಗಾಯನಮಃ	ಪರಸ್ಮೈನಮಃ	೧೦೮

ಇತಿ ಶ್ರೀರಾಮಷ್ಟೋತ್ತರ ಶತನಾಮಾವಳಿಃ ಸಂಪೂರ್ಣಂ

ಶ್ರೀ ವ್ಯಾಸೋಕ್ತಂ

ಶ್ರೀರಾಮಾಷ್ಟಕಮ್

ಶ್ರೀಃ॥ ಭಜೇ ವಿಶೇಷಸುಂದರಂ ಸಮಸ್ತ ಪಾಪಖಂಡನಂ।
ಸ್ವಭಕ್ತ ಚಿತ್ತರಂಜನಂ ಸದೈವ ರಾಮಮದ್ವಯಮ್ ॥೧॥

ಜಟಾಕಲಾಪಶೋಭಿತಂ ಸಮಸ್ತ ಪಾಪನಾಶಕಂ।
ಸ್ವಭಕ್ತ ಭೀತಿ ಭಂಜನಂ ಭಜೇಹ ರಾಮಮದ್ವಯಮ್ ॥೨॥

ನಿಜಸ್ವರೂಪ ಬೋಧಕಂ ಕೃಪಾಕರಂ ಭವಾಪಹಂ।
ಸಮಂ ಶಿವಂ ನಿರಂಜನಂ ಭಜೇಹ ರಾಮಮದ್ವಯಮ್ ॥೩॥

ಸಹ ಪ್ರಪಂಚಕಲ್ಪಿತಂಹ್ಯನಾಮರೂಪ ವಾಸ್ತವಂ।
ನಿರಾಕೃತಿಂ ನಿರಾಮಯಂ ಭಜೇಹ ರಾಮದ್ವಯಮ್ ॥೪॥

ನಿಷ್ಪ್ರಪಂಚ ನಿರ್ವಿಕಲ್ಪ ನಿರ್ಮಲಂ ನಿರಾಮಯಂ।
ಚಿದೇಕರೂಪಸಂತತಂ ಭಜೇಹ ರಾಮಮದ್ವಯಮ್ ॥೫॥

ಭವಾಬ್ಧಿಪೋತ ರೂಪಕಂಹ್ಯಶೇಷ ದೇಹಕಲ್ಪಿತಂ।
ಗುಣಾಕರಂ ಕೃಪಾಕರಂ ಭಜೇಹ ರಾಮದ್ವಯಮ್ ॥೬॥

ಮಹಾವಾಕ್ಯಬೋಧಕೈರ್ವಿರಾಜಮಾನ ವಾಕ್ಭಿರ್ಯೈಃ।
ಪರಬ್ರಹ್ಮ ವಾಚಕಂ ಭಜೇಹ ರಾಮಮದ್ವಯಮ್ ॥೭॥

ಶಿವಪ್ರದಂ ಸುಖಿಪ್ರದಂ ಭವಚ್ಛಿದಂ ಭ್ರಮಾಪಹಂ।
ವಿರಾಜಮಾನದೈಶಿಕಂ ಭಜೇಹ ರಾಮಮದ್ವಯಮ್ ॥೮॥

CC-O. In Public Domain. Digitized by eGangotri

ರಾಮಾಷ್ಟಕಂ ಪತತಿ ಯಃ ಸುಕರಂ ಸುಪುಣ್ಯಂ
ವ್ಯಾಸೇನ ಶ್ರಿಯಂ ವಿಪುಲ ಸೌಖ್ಯಮನಂತಕೀರ್ತಿಂ
ವಿದ್ಯಾಂ ಶ್ರಿಯಂ ವಿಪುಲ ಸೌಖ್ಯಮನಂತಕೀರ್ತಿಂ
ಸಂಪ್ರಾಪ್ಯ ದೇಹವಿಲಯೇ ಲಭತೇ ಚ ಮೋಕ್ಷಮ್ ॥೯॥

॥ಇತಿ ಶ್ರೀ ವ್ಯಾಸ ವಿರಚಿತಂ ರಾಮಾಷ್ಟಕಮ್ ಸಮಾಪ್ತಮ್॥

ಶ್ರೀರಾಮಾಷ್ಟಕಮ್ - ಭಾವಾನುವಾದ

ಇದು ಶ್ರೀ ವ್ಯಾಸರಿಂದ ರಚಿತವಾದ ಎಂಟು ಪದ್ಯಗಳ ರಾಮಸ್ತೋತ್ರ. ರಾಮನಿಗೆ ಸಮನಾದ ದೇವರಿಲ್ಲ. ಆತನೇ ಪರಬ್ರಹ್ಮಸ್ವರೂಪ, ಸಂಸಾರ ಸಾಗರದಿಂದ ಭಕ್ತರನ್ನು ಕಡೆಹಾಯಿಸುವ ಪರಮ ಕರುಣಾನಿಧಿಯೆನಿಸಿದ್ದಾನೆ.

ಶ್ರೀರಾಮಚಂದ್ರನು 'ತತ್ವಮಸಿ' ಮುಂತಾದ ಉಪನಿಷತ್ ವಾಕ್ಯಗಳಿಂದ ಪ್ರತಿಪಾದ್ಯನಾಗಿದ್ದಾನೆ. ಇಂತಹ ಚಿದಾನಂದ ರೂಪನಾದ ರಾಮನನ್ನು ಭಜಿಸುತ್ತೇನೆ. ಶ್ರೀರಾಮನ ನಾಮಸ್ಮರಣೆ ಮಂಗಳಪ್ರದವೂ, ಸುಖಪ್ರದವೂ, ಸಂಸಾರಬಾಧೆಯಿಂದ ವಿಮೋಚಕವೂ ಆಗಿದೆ. ಶ್ರೀರಾಮನು ತನ್ನ ದಿವ್ಯಸುಂದರ ರೂಪದಿಂದ ಹೇಗೆ ಸುಂದರನಾಗಿರುವನೋ ಹಾಗೆಯೇ ನಿರಾಕಾರನಾಗಿಯೂ ಇದ್ದಾನೆ.

ಈ ರಾಮಾಷ್ಟಕವನ್ನು ಯಾರು ಪ್ರಾತಃಕಾಲದಲ್ಲಿ ಭಕ್ತಿಯಿಂದ ಪಠಿಸುವರೋ ಅವರಿಗೆ ವಿದ್ಯೆ, ಯಶಸ್ಸು ಸಂಪತ್ತು ಕೀರ್ತಿಗಳು ಲಭಿಸುತ್ತವೆ. ದೇಹಾಂತ್ಯದಲ್ಲಿ ಅಂತಹ ಸದ್ಭಕ್ತರಿಗೆ ಮೋಕ್ಷ ದೊರೆತು ರಾಮ ಸನ್ನಿಧಿ ದೊರೆತು ಶಾಶ್ವತ ಸುಖ ದೊರೆಯುತ್ತದೆ.

• • • • • • •

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಕೆಲವು ಪ್ರಕಟಣೆಗಳು

ಗಣಪತಿ ಸಹಸ್ರನಾಮ	ವೇಂಕಟೇಶ ಸಹಸ್ರನಾಮ
ಶಿವ ಸಹಸ್ರನಾಮ	ಲಲಿತಾ ಸಹಸ್ರನಾಮ
ಆಂಜನೇಯ ಸಹಸ್ರನಾಮ	ಲಕ್ಷ್ಮೀ ಸಹಸ್ರನಾಮ
ಸುಬ್ರಹ್ಮಣ್ಯ ಸಹಸ್ರನಾಮ	ನವಗ್ರಹ ಜಪವಿಧಿ
ವಿಷ್ಣು ಸಹಸ್ರನಾಮ	ಶಿವಸ್ತೋತ್ರಮಾಲಾ
ರಾಘವೇಂದ್ರ ಸಹಸ್ರನಾಮ	ದೇವೀಸ್ತೋತ್ರಮಾಲಾ
ನೃಸಿಂಹ ಸಹಸ್ರನಾಮ	ಕುಬೇರ ಪೂಜಾವಿಧಿಃ

Design Creators ✆ 94489 54740

ಟಿ.ಎನ್. ಕೃಷ್ಣಯ್ಯಶೆಟ್ಟಿ ಅಂಡ್ ಸನ್

ಚಿಕ್ಕಪೇಟೆ • ಬೆಂಗಳೂರು : 560 053 ✆ 22258217

Sri Rama Mahime

Sri Vidyabharathi Book Centre, Sringeri

₹20.00

Printed at : Sree Venkateswara Printing Press ✆ 22444763